
28 ಸೆಪ್ಟೆಂಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 199 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಗ್ವಾಂಗ್‌ಜುದಲ್ಲಿ ಶನಿವಾರ ನಡೆದ ವಿಶ್ವ ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಕೈಗಳ ಸಹಾಯವಿಲ್ಲದೇ ಚಿನ್ನ ಗೆದ್ದ ವಿಶ್ವದ ಮೊದಲ ಮಹಿಳಾ ಸ್ಪರ್ಧಿ ಎಂಬ ಹೆಗ್ಗಳಿಕೆ ಭಾರತದ ಶೀತಲ್ ದೇವಿ ಅವರದಾಯಿತು.



ನವರಾತ್ರಿಯ ಶಕ್ತಿ, ಆಯುರ್ವೇದದ ಯುಕ್ತಿ » 2



ಹೊಟ್ಟೆಪಾಡು ಯೋಚಿಸಲಿಲ್ಲ ಸಾಹಿತ್ಯವೇ ಜೀವನವೆಂದರು! » 3



ಕೃಷಿ ಭೂಮಿಗೆ ನೀರು, ವಿದ್ಯುತ್: ಆರ್ಥಿಕ ಸ್ಥಿತಿಗೆ ಬಲ » 4

# ಜಿಬಿಐಟಿ: ಡಿಕೆಶಿ-ಜೆಡಿಎಸ್ ಜಂಗೀ ಕುಸ್ತಿ

## ಮಧ್ಯವರ್ತಿಗಳ ಮಾತು ಕೇಳಲ್ಲವೆಂದ ಶಿವಕುಮಾರ್ | ಇಂದಿನಿಂದ ಜೆಡಿಎಸ್ ಹೋರಾಟ

• ಪ್ರಜೋದಯ ವರದಿ

**ಬೆಂಗಳೂರು:** ಬಿಡದಿ ಬಳಿ ಗ್ರೇಟರ್ ಬೆಂಗಳೂರು ಸಮಗ್ರ ನಗರ ಯೋಜನೆಗೆ (ಜಿಬಿಐಟಿ) ಭೂಮಿ ಸ್ವಾಧೀನಪಡಿಸಿಕೊಳ್ಳುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಜೆಡಿಎಸ್ ತೀವ್ರ ಖಂಡನೆ ವ್ಯಕ್ತಪಡಿಸಿದ್ದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗು ಜೆಡಿಎಸ್ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ಭೂಮಿ ಸ್ವಾಧೀನ ಪ್ರಕ್ರಿಯೆ ವಿರೋಧಿಸಿ ಭಾನುವಾರದಿಂದ ಜೆಡಿಎಸ್ ಹೋರಾಟಕ್ಕೆ ಕರೆ ನೀಡಿದ್ದರೆ ಮತ್ತೊಂದೆಡೆ ಡಿ.ಕೆ.ಶಿವಕುಮಾರ್ ಅವರು ಸ್ವಾಧೀನ ಪ್ರಕ್ರಿಯೆಯಿಂದ ಹಿಂದೆ ಸರಿಯುವುದಿಲ್ಲವೆಂದು ಸವಾಲು ಹಾಕಿದ್ದಾರೆ. ಈ ವಿಚಾರವು ರಾಜಕೀಯ ಬದ್ಧ ವೈರಿಗಳ ಜಂಗೀ ಕುಸ್ತಿಗೆ ಕಾರಣವಾಗುವ ಸಾಧ್ಯತೆಗಳು ದಟ್ಟವಾಗಿವೆ.

ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ. ಶಿವಕುಮಾರ್ ಅವರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಶಾಸಕ ಮಂಜುನಾಥ್ ಬಿಜೆಪಿ ಸರ್ಕಾರ 900 ಎಕರೆ ಜಾಗವನ್ನು ಕೆಐಎಡಿಬಿಗೆ ನೀಡುವಾಗ ಸಹಕಾರ ಕೊಟ್ಟಿದ್ದೇಕೆ. ಈಗ ನನ್ನನ್ನು ಪ್ರಶ್ನೆ ಮಾಡುತ್ತಿರುವುದೇಕೆಂದು ಪ್ರಶ್ನಿಸಿದರು.

ದೇವೇಗೌಡರು ಹೋರಾಟ ಮಾಡುವುದಾದರೆ ಬಹಳ ಸಂತೋಷ. ಈ ಯೋಜನೆಗೆ ಅಧಿಸೂಚನೆ ಹೊರಡಿಸಿದ್ದೇ ಅವರ ಸುಪುತ್ರ. ಈ ಬಿಡದಿ ಟೌನ್‌ಶಿಪ್‌ಗೆ ಡಿಎಲ್‌ಎಫ್ ಜೊತೆ



ಒಪ್ಪಂದ ಮಾಡಿಕೊಂಡಿದ್ದೂ ಅವರೇ, ಹಣ ಕಟ್ಟಿಸಿಕೊಂಡಿದ್ದೂ ಅವರೇ. ಅವರ ಆಡಳಿತ ಅವಧಿಯಲ್ಲಿ ಈ ಭೂಮಿಯನ್ನು ಯಾಕೆ ಡಿನೋಟಿಫಿಕೇಷನ್ ಮಾಡಲಿಲ್ಲ. ಯಡಿಯೂರಪ್ಪ ಅವರು ಕೆಐಎಡಿಬಿಗೆ ಭೂಮಿ ಕೊಟ್ಟಾಗ ಆ ಭಾಗದ ಎಲ್ಲಾ ರೈತರು ಪರಿಹಾರ ಪಡೆದಿದ್ದಾರೆ. ಈಗ ಆ ಜಾಗ ಕೆಐಎಡಿಬಿ ಸ್ವತ್ತಾಗಿದೆ. ಇವರೆಲ್ಲ ಅಂದು ಪ್ರಶ್ನೆ ಮಾಡದೇ ಸಹಕಾರ ಕೊಟ್ಟಿದ್ದೇಕೆಂದು ಕೇಳಿದರು. ಡಿನೋಟಿಫಿಕೇಶನ್ ಮಾಡುವುದು ಬೇಡ, ಆ ಭೂಮಿಯನ್ನು ಯಥಾಸ್ಥಿತಿಯಲ್ಲಿ ಬಿಡಿ ಎಂಬ ಆಗ್ರಹಕ್ಕೆ ಪ್ರತಿಕ್ರಿಯಿಸಿದ ಅವರು, ಅವರ ಮಾತು ಕೇಳಲು ನಾನು ತಯಾರಿಲ್ಲ. ನಮ್ಮ ಸರ್ಕಾರ ಕಾನೂನು ಪ್ರಕಾರ ಕೆಲಸ ಮಾಡುತ್ತಿದೆ. ಯಡಿಯೂರಪ್ಪ ಅವರ ಕಾಲದಲ್ಲೂ ಇಲ್ಲಿನ ಭೂಮಿಗೆ 90 ಲಕ್ಷದಿಂದ 1 ಕೋಟಿ ರೂ.ಗೆ ಪರಿಹಾರ ನಿಗದಿ ಮಾಡಿದಾಗ, ಆ ಜಾಗವನ್ನು ಯಥಾಸ್ಥಿತಿಯಲ್ಲೇ ಬಿಡಿಸಬಹುದಿತ್ತಲ್ಲವೇ. ಯಾಕೆ ಬಿಡಿಸಲಿಲ್ಲ. ಆಗ ಮಂಜುನಾಥ್ ಅವರೇ ಶಾಸಕರಾಗಿದ್ದರಲ್ಲವೇ. ಈ ಯೋಜನೆಗೆ ರೈತರ ವಿರೋಧವಿಲ್ಲ, ರೈತರ ಸಂಪೂರ್ಣ ಸಹಕಾರವಿದೆ ಎಂದು ತಿಳಿಸಿದರು.

**ಇದು ರೈತರ ಪರವಾದ ಹೋರಾಟ. ನಾವು ಯಾರ ವಿರುದ್ಧವೂ ವೈಯಕ್ತಿಕ ಹೋರಾಟ ನಡೆಸುತ್ತಿಲ್ಲ. ನಾವು ಟೌನ್‌ಶಿಪ್ ವಿರೋಧಿಗಳಲ್ಲ. ರೈತರ ಹಿತ ಕಾಯಲು ನಿರಂತರ ಹೋರಾಟ ಮಾಡುತ್ತೇವೆ.**

**-ನಿಖಿಲ್ ಕುಮಾರಸ್ವಾಮಿ,** ಜೆಡಿಎಸ್ ಯುವ ಘಟಕ ಅಧ್ಯಕ್ಷ

### ಮಧ್ಯವರ್ತಿಗಳ ಮಾತು ಕೇಳುವುದಿಲ್ಲ

ಭೂಮಿ ಸ್ವಾಧೀನ ಸಂಬಂಧ ಗಲಾಟೆಗಳಾದರೆ ಕಾನೂನಿದೆ. ಕಾನೂನು ಚೌಕಟ್ಟಿನಲ್ಲಿ ನಾವು ಮುಂದುವರಿಯುತ್ತೇವೆ. ನಾನು ರೈತರಿಗೆ ದೊಡ್ಡ ಆಫರ್ ಕೊಟ್ಟಿದ್ದೇನೆ. ಯಾರು ಈ ಪರಿಹಾರ ಬೇಡ ಎನ್ನುತ್ತಾರೋ ಅವರಿಗೆ ಕಾನೂನು ಪ್ರಕಾರ ಈ ಹಿಂದೆ ಹೊರಡಿಸಿದ್ದ ಅಧಿಸೂಚನೆಗೆ ಇರುವ ಮಾರ್ಗಸೂಚಿ ಮೌಲ್ಯ ಆಧಾರದ ಮೇಲೆ ನ್ಯಾಯಾಲಯಕ್ಕೆ ನಾವು ಹಣ ಠೇವಣಿ ಮಾಡುತ್ತೇವೆ. ಅವರ ಕಾಲದಲ್ಲೇ ಸರಿ ಮಾಡಬಹುದಿತ್ತಲ್ಲವೇ. ಯಾರೋ ಬ್ರೋಕರ್ ಹೇಳುತ್ತಾರೆಂದು ನಾನು ಕೇಳುವುದಿಲ್ಲ ಎಂದರು.

**ನೈಜ ರೈತರು ಯಾರು, ನಕಲಿ ರೈತರು ಯಾರು ಎಂಬುದೂ ಗೊತ್ತಿದೆ. ಏಜೆಂಟ್‌ಗಳು ಯಾರು ಎಂಬುದೂ ಗೊತ್ತಿದೆ. ಕೆಐಡಿಬಿಗೆ 900 ಎಕರೆ ಭೂಮಿ ಕೊಟ್ಟಾಗ ಯಾರು ಹಣ ಪಡೆದಿದ್ದಾರೆ. ಅದರ ಪಟ್ಟಿ ಬಿಡುಗಡೆ ಮಾಡಬೇಕಾ.**

**-ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ**

### ಇಂದಿನಿಂದ ಜೆಡಿಎಸ್ ಹೋರಾಟ

ರಾಜ್ಯ ಸರ್ಕಾರವು ಬಿಡದಿ ಬಳಿ ಟೌನ್‌ಶಿಪ್ ನಿರ್ಮಿಸಲು ರೈತರ ಫಲವತ್ತಾದ ಎಕರೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದರ ವಿರುದ್ಧ, ಜೆಡಿಎಸ್ ಭಾನುವಾರದಿಂದ ದೊಡ್ಡ ಮಟ್ಟದ ಹೋರಾಟ ಆರಂಭಿಸಲಿದೆಯೆಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್ (ಜಿಬಿಐಟಿ) ನಿರ್ಮಾಣಕ್ಕೆ ಹತ್ತು ಹಳ್ಳಿಗಳ ಜಮೀನನ್ನು ಸರ್ಕಾರ ಗುರುತಿಸಿದೆಯೆಂದು ಆರೋಪಿಸಿದರು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಸರ್ಕಾರ ಈ ಯೋಜನೆ ಕೈಬಿಡುವವರೆಗೂ, ದೇವನಹಳ್ಳಿಯ ಚನ್ನರಾಯಪಟ್ಟಣ ರೈತರ ಮಾದರಿಯಲ್ಲಿಯೇ ಹೋರಾಟ ನಡೆಸುತ್ತೇವೆಂದರು.

## ಗಾಂಜಾ ಮಾರಾಟ ಯತ್ನ : 11 ವಿದ್ಯಾರ್ಥಿಗಳ ಬಂಧನ


• ಪ್ರಜೋದಯ ವರದಿ



**ಮಂಗಳೂರು:** ಗಾಂಜಾ ಪದಾರ್ಥ ಸಂಗ್ರಹ ಮತ್ತು ಮಾರಾಟ ಮಾಡಲು ಯತ್ನಿಸಿದ ಆರೋಪದ ಮೇಲೆ ಕೇರಳದ ಎರಡನೇ ವರ್ಷದ ಬಿಬಿಎ ವ್ಯಾಸಂಗ ಮಾಡುತ್ತಿದ್ದ 11 ವಿದ್ಯಾರ್ಥಿಗಳನ್ನು ಮಂಗಳೂರಿನಲ್ಲಿ ಬಂಧಿಸಲಾಗಿದೆ.

ಎಲ್ಲಾ ಆರೋಪಿಗಳು ಕಾಲೇಜು ಅಧ್ಯಯನಕ್ಕಾಗಿ ನಗರದಲ್ಲಿ ತಂಗಿದ್ದರು. ದಾಳಿಯಲ್ಲಿ 12.26 ಕೆಜಿ ಗಾಂಜಾ ಪತ್ತೆಯಾಗಿದ್ದು, ಅದನ್ನು ಒಡಿಶಾದಿಂದ ತರಲಾಗಿದೆ. ಬಳಿಕ ಅದನ್ನು ಏಳು ಪೊಟ್ಟಣಗಳಲ್ಲಿ ಪ್ಯಾಕ್ ಮಾಡಲಾಗಿದೆ ಎಂದು ವರದಿಯಾಗಿದೆ. ಪ್ಯಾಕೇಜಿಂಗ್‌ನ ಪ್ರಮಾಣ ಮತ್ತು ವಿಧಾನವು ಮಾರಾಟದ ಪ್ರಯತ್ನವಾಗಿತ್ತು. ವಶಪಡಿಸಿಕೊಂಡ ವಸ್ತುವಿನ ಮೌಲ್ಯ ಸುಮಾರು 2.45 ಲಕ್ಷ ರೂ. ಆಗಿದೆ. ಪ್ರಕರಣದಲ್ಲಿ ಭಾಗಿಯಾಗಿರುವ ಇತರ ಸಂಭಾವ್ಯ ಶಂಕಿತರನ್ನು ಮತ್ತು ವಿಶಾಲ ಜಾಲ ಗುರುತಿಸಲು ಹೆಚ್ಚಿನ ತನಿಖೆ ನಡೆಯುತ್ತಿದೆಯೆಂದು ಪೊಲೀಸರು ತಿಳಿಸಿದ್ದಾರೆ.

## ಮಲೆನಾಡು ಭಾಗದಲ್ಲಿ ಮಳೆಯ ಕಿರಿಕಿರಿ



• ಪ್ರಜೋದಯ ವರದಿ

**ಹಾಸನ:** ಮಲೆನಾಡು ಭಾಗದಲ್ಲಿ ಕಳೆದ ಎರಡು ದಿನಗಳಿಂದ ಮತ್ತೆ ಮಳೆಯ ಅಬ್ಬರ ಕಾಣಿಸಿಕೊಂಡಿರುವುದರಿಂದ ಜನರು ಕಿರಿಕಿರಿ ಅನುಭವಿಸುವಂತಾಗಿದೆ.

ಸಕಲೇಶಪುರ ತಾಲ್ಲೂಕಿನಾದ್ಯಂತ ಬಿಟ್ಟು ಬಿಟ್ಟು ಮಳೆ ಸುರಿಯುತ್ತಿರುವುದರಿಂದ ಜನರ ದೈನಂದಿನ ಚಟುವಟಿಕೆಗೆ ಅಡ್ಡಿಯುಂಟಾಗಿದೆ. ನಿರಂತರ ಮಳೆಯಿಂದಾಗಿ ಕೃಷಿ ಕಾರ್ಯಗಳಿಗೆ ತೊಂದರೆಯುಂಟಾಗುತ್ತಿದೆ. ಹೆತ್ತೂರು, ಬಿಸ್ಲೆ, ಹೊಂಗಡಹಳ್ಳ, ಬ್ಯಾಕರವಳ್ಳಿ, ಯಸಳೂರು, ವಣಗೂರು, ಯಸಳೂರು ಭಾಗದಲ್ಲಿ ಶನಿವಾರ ಬೆಳಿಗ್ಗೆಯಿಂದ ರಾತ್ರಿವರೆಗೂ ನಿರಂತರವಾಗಿ ಮಳೆ ಸುರಿದಿದೆ.

ಮಲೆನಾಡು, ಅರೆಮಲೆನಾಡು ಭಾಗದಲ್ಲಿ ಕಳೆದ ಐದು ತಿಂಗಳಿಂದ ಮಳೆ ಸುರಿಯುತ್ತಿರುವುದರಿಂದ ಜನರು ಮಳೆಯಿಂದ ತತ್ತರಿಸಿ ಹೋಗಿದ್ದಾರೆ. ಪಶ್ಚಿಮಘಟ್ಟದ ಗಡಿ ಗ್ರಾಮಗಳಲ್ಲಿ ಶೀತದ ವಾತಾವರಣ ನಿರ್ಮಾಣಗೊಂಡು ಜನರು ಪರಿತಪಿಸುವಂತಾಗಿದೆ. ಇನ್ನೂ ಒಂದು ವಾರಗಳ ಕಾಲ ಮಳೆಯ ಮುನ್ಸೂಚನೆ ಇರುವುದರಿಂದ ಅ.4ವರೆಗೂ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದರಿಂದ ಜನರು ಚಿಂತಾಕ್ರಾಂತರಾಗಿದ್ದಾರೆ.

ಆಲೂರು, ಬೇಲೂರು ತಾಲ್ಲೂಕು ಭಾಗದಲ್ಲೂ ಆಗಾಗ್ಗೆ ಮಳೆ ಸುರಿಯುತ್ತಿದೆ. ನಗರದಲ್ಲೂ ತುಂತುರು ಮಳೆಯಾಗುತ್ತಿರುವುದರಿಂದ ಜನರು ಕಿರಿಕಿರಿ ಅನುಭವಿಸುವಂತಾಗಿದೆ.

## ಪ್ರವಾಸಿಗರ ಸ್ನೇಹಿಯಾಗಿ ಪ್ರವಾಸೋದ್ಯಮ ಬೆಳೆಯಲಿ

• ಪ್ರಜೋದಯ ವರದಿ





**ಹಾಸನ:** ಪ್ರಾಕೃತಿಕವಾಗಿ ಅತ್ಯಂತ ಶ್ರೀಮಂತ ಜಿಲ್ಲೆ ಎಂಬ ಖ್ಯಾತಿಯನ್ನು ಹಾಸನ ಗಳಿಸಿದ್ದು ಪ್ರವಾಸಿ ತಾಣಗಳು ಪ್ರವಾಸಿಗರ ಸ್ನೇಹಿಯಾಗಿ ಅಭಿವೃದ್ಧಿ ಹೊಂದಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಡೆಸ್ಟಿನಿ ರೈಡರ್ಸ್ ವತಿಯಿಂದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ದೊಡ್ಡಗದ್ದವಳ್ಳಿ ಲಕ್ಷ್ಮೀದೇವಿ ದೇವಾಲಯದಿಂದ ಹಗರೆ ಮಾರ್ಗವಾಗಿ ಹಳೇಬೀಡು ದೇವಸ್ಥಾನದವರೆಗೂ ಶನಿವಾರ ಆಯೋಜಿಸಿದ್ದ ಬೈಕ್ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಪ್ರವಾಸೋದ್ಯಮ ಸುಸ್ಥಿರತೆ ಜೊತೆ ಜೊತೆಯಾಗಿ ಬೆಳೆಯಬೇಕೆಂದರು.

ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ಅಭಿವೃದ್ಧಿಯಾಗಬೇಕಾಗಿದೆ. ಪ್ರವಾಸೋದ್ಯಮ ಸ್ಥಳಗಳ ಬಗ್ಗೆ ಕೇವಲ ಪ್ರಚಾರಪಡಿಸುವುದಲ್ಲದೆ ಮೂಲ ಸೌಕರ್ಯಗಳನ್ನು ಒದಗಿಸಿ ಕೊಡಬೇಕು. ಪುರಾತನ ಮತ್ತು ಐತಿಹಾಸಿಕ ಸ್ಥಳಗಳನ್ನು ಸಂರಕ್ಷಣೆ ಮಾಡುವುದರ ಮೂಲಕ ಮುಂದಿನ ಪೀಳಿಗೆಗೆ ಉಳಿಸಬೇಕು. ಜೊತೆಗೆ ಆ ಸ್ಥಳದ ಇತಿಹಾಸದ ಕುರಿತಾಗಿ ತಿಳಿಹೇಳ ಬೇಕೆಂದರು.

**ಹೊಯ್ಸಳೋತ್ಸವ ಮಾಡುವಂತೆ ಸಾಕಷ್ಟು ಮನವಿ ಬಂದಿವೆ. ಈ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಜಿಲ್ಲೆಯ ಪ್ರವಾಸಿ ತಾಣಗಳ ರಕ್ಷಣೆ ಹಾಗು ಪ್ರವಾಸಿಗರ ಆಕರ್ಷಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.**

**-ಕೆ.ಎಸ್.ಲತಾಕುಮಾರಿ,** ಜಿಲ್ಲಾಧಿಕಾರಿ

ಶಿಲ್ಪಕಲೆಗೆ ಪ್ರಸಿದ್ಧವಾದ ತಾಣ ಹಳೇಬೀಡಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಹೊಂದಿದ ಸ್ಥಳವಾಗಿದೆ. ಇಲ್ಲಿಯೂ ವಾಹನ ನಿಲುಗಡೆಗೆ ಸ್ಥಳಾವಕಾಶದ ಸಮಸ್ಯೆ, ಸ್ವಚ್ಛತೆ, ರಸ್ತೆ ಸೇರಿ ಅನೇಕ ಸಮಸ್ಯೆಗಳು ಕಂಡುಬಂದಿದೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಹಾಳಾಗಿರುವ ಸ್ಲಾಬ್ ಸರಿಪಡಿಸಿ, ವ್ಯವಸ್ಥಿತವಾಗಿ ಕಸ ವಿಲೇವಾರಿ ಮಾಡುವುದರ » ನಾಲ್ಕನೇ ಪುಟದಲ್ಲಿ

## ಕ್ರಮ ಕೈಗೊಳ್ಳದಿದ್ದರೆ ಬೀದಿಗಿಳಿದು ಹೋರಾಟ: ಬಿ.ಶಿವರಾಮ್ ಎಚ್ಚರಿಕೆ

# ಅರಣ್ಯ ಭೂಮಿ ಒತ್ತುವರಿ: ರೈತರ ಪರ ಮಾರ್ಗಸೂಚಿಗೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಅರಣ್ಯ ಭೂಮಿ ಗುರುತಿಸಲು ಸುಪ್ರೀಂಕೋರ್ಟ್ ಎಸ್‌ಐಟಿ ರಚಿಸಲು ಸೂಚಿಸಿದೆ. ಈ ಹಿನ್ನಲೆ ರಾಜ್ಯ ಸರ್ಕಾರ ಅರಣ್ಯ ಭೂಮಿ ಹಿಡುವಳಿದಾರರಿಗೆ ಪೂರಕವಾದ ಮಾರ್ಗಸೂಚಿ ರಚಿಸಬೇಕೆಂದು ಮಾಜಿ ಸಚಿವ ಬಿ.ಶಿವರಾಮ್ ಅವರು ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಂದಾಯ ಇಲಾಖೆ ಸ್ವಾಧೀನದಲ್ಲಿ ರುವ ಯಾವುದೇ ಅರಣ್ಯ ಭೂಮಿಯನ್ನು ಅರಣ್ಯ ಉದ್ದೇಶಕ್ಕಾಗಿ ಹೊರತುಪಡಿಸಿ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗೆ ಹಂಚಿಕೆ ಮಾಡಲಾಗಿದೆಯೇ ಎಂದು ಪರಿಶೀಲಿಸಲು ಸುಪ್ರೀಂ ಕೋರ್ಟ್ ಎಸ್‌ಐಟಿ ರಚಿಸಲು ಸೂಚಿಸಿರುವುದು ಸ್ವಾಗತಾರ್ಹ. ಪರಿಶೀಲನೆ ವೇಳೆ ಸರ್ಕಾರ ರೈತರ ಪರವಾದ ತೀರ್ಮಾನ ತೆಗೆದುಕೊಳ್ಳದಿದ್ದರೆ ಜನರು ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆಂದು ಎಚ್ಚರಿಸಿದರು.





ನಾಲ್ಕು ತಿಂಗಳೊಳಗೆ ರಾಜ್ಯ ಹಾಗು ಜಿಲ್ಲಾ ಮಟ್ಟದಲ್ಲಿ ಎಸ್‌ಐಟಿ ತಂಡ ರಚಿಸಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಒಳಗೊಂಡಂತೆ ಅರಣ್ಯ ಒತ್ತುವರಿದಾರರ ಕುರಿತು ಮಾಹಿತಿ ಕಲೆಹಾಕಿ ಸರ್ಕಾರಕ್ಕೆ ವರದಿ ನೀಡಬೇಕು. ಜೊತೆಗೆ ಅರಣ್ಯ ಭೂಮಿ ಗುರುತಿಸಿ ವಶಕ್ಕೆ ಪಡೆಯಬೇಕು ಅಥವಾ ದರ ನಿಗದಿ ಪಡಿಸಿ ಆ ಹಣವನ್ನು ಅರಣ್ಯೀಕರಣಕ್ಕೆ ಬಳಕೆ ಮಾಡಿಕೊಳ್ಳಬೇಕೆಂದು ಸುಪ್ರೀಂಕೋರ್ಟ್ ಹೇಳಿದೆ. ಕೋರ್ಟ್ ನಿರ್ದೇಶನದಂತೆ ಕ್ರಮ ಕೈಗೊಂಡರೆ ಜಿಲ್ಲೆಯಲ್ಲಿ ಸುಮಾರು 15 ರಿಂದ 20 ಸಾವಿರ ಕುಟುಂಬಗಳು ಬೀದಿಪಾಲಾಗಲಿವೆ. ಆದ್ದರಿಂದ ಸರ್ಕಾರ ಕೂಡಲೇ ಅಗತ್ಯ ಕ್ರಮ ಕೈಗೊಂಡು ಜನರ ರಕ್ಷಣೆಗೆ ಬರಬೇಕೆಂದು ಆಗ್ರಹಿಸಿದರು.

ಕೋರ್ಟ್‌ನಿಂದ ಈಗಾಗಲೇ ಯಾವ ಯಾವ ನಿಯಮಗಳಡಿ ಅರಣ್ಯ ಭೂಮಿ ಒತ್ತುವರಿ ದಾರರನ್ನು ತೆರವು ಮಾಡಬೇಕೆಂಬುದರ ಬಗ್ಗೆ ತಮ್ಮ ಆದೇಶದಲ್ಲಿ ಉಲ್ಲೇಖಿಸಿದೆ. ಅದನ್ನು ಮನಗಂಡು ರೈತರ ಹಾಗು ಹಿಡುವಳಿದಾರರ ಹಿತ ದೃಷ್ಟಿಯಿಂದ ಪೂರಕವಾಗ ಮಾರ್ಗಸೂಚಿ ರಚಿಸಿ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ನಾನು ಸಚಿವನಾಗಿದ್ದ ಅವಧಿಯಲ್ಲೇ ಜಿಲ್ಲೆಯಲ್ಲಿ ಶೇ.50ರಷ್ಟು ರೈತರಿಗೆ ಹಾಗು ಇತರರಿಗೆ ಮಂಜೂರಾತಿ ಮಾಡಿದ್ದೇನೆ. ಐದಳ್ಳ ಕಾವಲು, ಸೊಪ್ಪಿನಳ್ಳಿ, ನಿಟ್ಟೂರು, ನೀಲಗಿರಿ ಕಾವಲು ವ್ಯಾಪ್ತಿಯಲ್ಲಿ ಕಂದಾಯ ದಾಖಲೆಯಿಂದ ಅಧಿಕೃತವಾಗಿ ದಾಖಲೆ ನಿರ್ಮಿಸಿ ಜಾಗ ಮಂಜೂರು ಮಾಡಿ ಸರ್ಕಾರದ ಆದೇಶದಂತೆ ಜನರಿಗೆ ಹಕ್ಕು ಪತ್ರ ನೀಡಲಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತಿಸಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿದರು.

ಕಾಂಗ್ರೆಸ್ ಉಳುವವನೇ ಭೂಒಡೆಯ ಎಂಬ ತತ್ವ ಅಳವಡಿಸಿಕೊಂಡು ಬಂದಿದೆ. ಈಗ ಅರಣ್ಯ ಒತ್ತುವರಿಯಾಗಿದೆ ಎಂಬ ಕಾರಣಕ್ಕೆ ಭೂಮಿಯನ್ನು ವಶಕ್ಕೆ ಪಡೆಯಬಾರದು. ಜನರು ನೂರಾರು ವರ್ಷದಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಸಚಿವರು, ಶಾಸಕರು ಗಮನಹರಿಸಬೇಕೆಂದರು.

ಅರಣ್ಯ ಪ್ರದೇಶ ಒತ್ತುವರಿ ಗುರುತಿಸಿ ವಶಕ್ಕೆ ಪಡೆದರೆ ಜಿಲ್ಲೆಯಲ್ಲಿ 25 ಸಾವಿರ ಕುಟುಂಬ ಬೀದಿಗೆ ಬರಲಿವೆ. ಸುಪ್ರೀಂ ಕೋರ್ಟ್ ಅಂತಿಮ ತೀರ್ಮಾನ ನೀಡಿ ಜನಸಾಮಾನ್ಯರಿಗೆ ನ್ಯಾಯ ಕೊಡಿಸುವ ಮೂಲಕ ತಾರ್ಕಿಕ ಅಂತ್ಯ ಹೇಳಬೇಕು. ಸರ್ಕಾರ ಈ ಬಗ್ಗೆ ಮುತುವರ್ಜಿ ವಹಿಸದಿದ್ದಲ್ಲಿ ಹೋರಾಟ ಕೈಗೊಳ್ಳುವುದು ಅನಿವಾರ್ಯವಾಗಲಿದೆ. ನಮ್ಮ ಪಕ್ಷ ಅಧಿಕಾರದಲ್ಲಿ ಇದ್ದರೂ ಹೋರಾಟದಲ್ಲಿ ನಾನು ರೈತರ ಪರ ಇರುತ್ತೇನೆಂದು ಹೇಳಿದರು.

### ಜಿಲ್ಲೆಯಲ್ಲಿ ಶೇ.15 ರಷ್ಟು ಮಂಜೂರಾತಿ

ಜಿಲ್ಲೆಯಲ್ಲಿ 2,11,763 ಎಕರೆ ಅರಣ್ಯ ಪ್ರದೇಶವಿದೆ. ಅದರಲ್ಲಿ ಶೇ.15 ರಷ್ಟು (35 ಸಾವಿರ ಎಕರೆಗೂ ಹೆಚ್ಚು) ಖಾಸಗಿಯವರಿಗೆ ಮಂಜೂರಾತಿ, ಒತ್ತುವರಿಯಾಗಿದೆ. ಅದರಲ್ಲಿ ಸಾಕಷ್ಟು ಭೂಮಿಯನ್ನು ಕಂದಾಯ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲೇ ರೈತರಿಗೆ ಮಂಜೂರಾತಿ ನೀಡಲಾಗಿದೆ. ನೂರಾರು ಜನರು ಈ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡು, ವ್ಯವಸಾಯ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಸರ್ಕಾರ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಗಮನಹರಿಸಬೇಕೆಂದು ಶಿವರಾಮ್ ಅವರು ಒತ್ತಾಯಿಸಿದರು.

## ಬಸ್ ನಿರ್ವಾಹಕನ ಮೇಲೆ ಹಲ್ಲೆ: 9 ಮಂದಿ ವಿರುದ್ಧ ಪ್ರಕರಣ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಅಂಕನಾಯಕನಹಳ್ಳಿ ಬಳಿ ಕ್ಷುಲ್ಲಕ ಕಾರಣಕ್ಕೆ ಬಸ್ ನಿರ್ವಾಹಕನ ಮೇಲೆ ಹಲ್ಲೆ ನಡೆಸಿದ್ದ ಒಂಬತ್ತು ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಗುರುವಾರ ಹಾಸನದಿಂದ ಅರಕಲಗೂಡಿಗೆ ತೆರಳುತ್ತಿದ್ದ ಬಸ್‌ನಲ್ಲಿದ್ದ ವಿದ್ಯಾರ್ಥಿನಿಗೆ ಕಂಡಕ್ಟರ್ ಬೇರೆ ಬಸ್‌ನಲ್ಲಿ ಹೋಗು ಎಂದು ಹೇಳಿದ್ದಕ್ಕೆ ತಮ್ಮ ಸಂಬಂಧಿಕರನ್ನು ಕರೆಸಿ, ಕಂಡಕ್ಟರ್ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸ್ ನಿರ್ವಾಹಕ ಬಸವರಾಜು ಅರಕಲಗೂಡು ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಈ ಹಿನ್ನಲೆ ಹಲ್ಲೆ ನಡೆಸಿದ ವನಿತಾ, ಲಕ್ಷ್ಮೀ, ಕುಮಾರ, ತಿಮ್ಮೇಗೌಡ, ಶೇಖರ್ ಪೂಜಾರಿ, ಸಂದೀಪ, ರವಿಕುಮಾರ, ಗಿಡ್ಡೇಗೌಡ ಹಾಗು ಇನ್ನಿತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ.

# 2030ಕ್ಕೆ ಹೆಚ್‌ಐವಿ-ಏಡ್ಸ್ ನಿರ್ಮೂಲನೆ ಗುರಿ

• ಪ್ರಜೋದಯ ವರದಿ

**ಹಾಸನ:** ಹೆಚ್‌ಐವಿ-ಏಡ್ಸ್ ಅನ್ನು ವಿಶ್ವದಾದ್ಯಂತ ನಿರ್ಮೂಲನೆ ಮಾಡಲು ವಿಶ್ವ ಆರೋಗ್ಯ ಸಂಸ್ಥೆ 2030ರ ಗಡುವು ಹಾಕಿಕೊಂಡಿದ್ದು ಮಾರಕ ಕಾಯಿಲೆ ನಿಯಂತ್ರಣಕ್ಕೆ ಸಾರ್ವಜನಿಕರ ಸಹಭಾಗಿತ್ವವೂ ಮುಖ್ಯವೆಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಅವರು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ ಹಾಗು ವಿವಿಧ ಸಂಘ ಸಂಸ್ಥೆಗಳಿಂದ ನಗರದಲ್ಲಿ ಹಮ್ಮಿಕೊಂಡಿದ್ದ ರೆಡ್ ರಿಬ್ಬನ್ ರನ್ ಮತ್ತು ಬೈಕ್ ಜಾಥಾಗೆ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಬಳಿ ಚಾಲನೆ ನೀಡಿ ಮಾತನಾಡಿ, ಹೆಚ್‌ಐವಿ/ಏಡ್ಸ್





ಕೇವಲ ವೈದ್ಯಕೀಯ ಸಮಸ್ಯೆಯಲ್ಲ. ಇದು ಸಾಮಾಜಿಕ ಸವಾಲು. ಜಾಗೃತಿ ಮೂಡಿಸುವ ಜವಾಬ್ದಾರಿ ಕೇವಲ ಆರೋಗ್ಯ ಇಲಾಖೆಯದ್ದಲ್ಲ. ಪ್ರತಿಯೊಬ್ಬ ನಾಗರಿಕರು ಜಾಗೃತಿ ವಹಿಸಬೇಕು. ವಿಶ್ವ ಆರೋಗ್ಯ ಸಂಸ್ಥೆ 2030ರೊಳಗೆ ಏಡ್ಸ್ ನಿರ್ಮೂಲನೆ ಗುರಿ ಹಾಕಿಕೊಂಡಿದೆ. ಭಾರತವೂ ಅದೇ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆಯೆಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಹೆಚ್‌ಐವಿ ಜಾಗೃತಿ ಗಾಗಿ ರಾಜ್ಯದ ಇತರೆ ಜಿಲ್ಲೆಗಳಿಗಿಂತ ವಿಭಿನ್ನ ವಾದ ಕಾರ್ಯಕ್ರಮ ನಡೆಸುತ್ತಿದ್ದೇವೆ. ಜಿಲ್ಲಾದ್ಯಂತ 280ಕ್ಕೂ » ನಾಲ್ಕನೇ ಪುಟದಲ್ಲಿ

## ಮಲೆನಾಡು ಭಾಗದಲ್ಲಿ ಬೀಡುಬಿಟ್ಟ ಕಾಡಾನೆ ಹಿಂಡು

• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಿಂಡು ಬೀಡುಬಿಟ್ಟು ನಿರಂತರವಾಗಿ ಹಾವಳಿ ನಡೆಸುತ್ತಿವೆ. ತಾಲ್ಲೂಕಿನ ವಳಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರ್ಕಹಳ್ಳಿ ಗ್ರಾಮದಲ್ಲಿ ದಾಳಿ ನಡೆಸಿ, ಭತ್ತದ ಬೆಳೆ, ಅಡಿಕೆ ತೋಟವನ್ನು ಹಾನಿ ಮಾಡಿವೆ. ಮರ್ಕಹಳ್ಳಿ ಗ್ರಾಮದ ಜಗದೀಶ್ ಆಚಾರ್ ಎಂಬುವವರ ಜಮೀನಿನಲ್ಲಿ ದಾಳಿ ನಡೆಸಿದ ಕಾಡಾನೆಗಳು ಭತ್ತದ ಗದ್ದೆಯನ್ನು ತುಳಿದು ನಾಶಪಡಿಸಿವೆ. ಬೆಳೆ ಕಳೆದುಕೊಂಡ ರೈತ ನಷ್ಟಕ್ಕೆ ಸಿಲುಕಿದ್ದಾರೆ.

ಕಾಡಾನೆಗಳ ಗುಂಪು ಮರ್ಕಹಳ್ಳಿ ಕಲ್ಲು ತೋಟ, ಹೊಂಗಡಳ್ಳ ಕಾಡುತೋಟ, ಜೇಡಿಗದ್ದೆ ಕಸ ವಿಲೇವಾರಿ ಘಟಕ, ಹಿರಿಯೂರು ಬೆಟ್ಟ ಮತ್ತು ಬೆಳ್ಳಿ ಕಟ್ಟೆ, ಹೊಸಳ್ಳಿಗ್ರಾಮದ ಹೊಸಳ್ಳಿ ಬೆಟ್ಟ, ಬೆಕ್ಕನಹಳ್ಳಿ ಗ್ರಾಮದ ಕಾರೆ ಕೊಪ್ಪಲು, ಮೆಕ್ಕಿರ ಮನೆ ಗ್ರಾಮದ ಹೇಗೋಡ್ಲು, ಆನೆ ಗುಂಡಿ ಗ್ರಾಮದ ಮೇಲು ಹಡ್ಲು, ಐಗೂರು ಗ್ರಾಮದ ನಿರ್ಮಾ ಎಸ್ಟೇಟ್ ಸುತ್ತಮುತ್ತಲ ಪ್ರದೇಶದಲ್ಲೇ ಬೀಡುಬಿಟ್ಟಿದೆ.

ಕಳೆದ ಮೂರ್ನಾಲ್ಕು ತಿಂಗಳಿಂದ ಕಾಡಾನೆಗಳ ಗುಂಪು ಹೆತ್ತೂರು ಮತ್ತು ಯಸಳೂರು ಹೋಬಳಿ ಭಾಗದಲ್ಲೇ ಬೀಡು



ಬಿಟ್ಟಿರುವುದರಿಂದ ಕಾಫಿ, ಅಡಿಕೆ ತೋಟಗಳು ಹಾನಿಗೊಳಗಾಗಿವೆ. ತೋಟಗಳಲ್ಲೇ ಗಜಪಡೆ ಬೀಡು ಬಿಟ್ಟಿರುವುದರಿಂದ ಕೆಲಸ ಮಾಡಲು ತೊಂದರೆಯಾಗಿದೆ. ನಾಟಿ ಮಾಡಿದ ಭತ್ತದ ಪೈರು ಹಸಿರಾಗಿ ಬೆಳೆದಿರುವುದರಿಂದ ಹಿಂಡು ಹಿಂಡಾಗಿ ದಾಳಿ ಇಡುವ ಕಾಡಾನೆಗಳು ತಿಂದು, ತುಳಿದು ಅಪಾರ ಪ್ರಮಾಣ ಬೆಳೆನಷ್ಟ ಉಂಟು ಮಾಡುತ್ತಿವೆ.

ಆಲೂರು ತಾಲ್ಲೂಕಿನ ಹಾಚಗೋಡನಹಳ್ಳಿ ಗ್ರಾಮದ ಅಕೇಶಿಯ ನೆಡುತೋಪು ಸುತ್ತಮುತ್ತ ಹಾಗು ಬೇಲೂರು ತಾಲ್ಲೂಕಿನ ಬೊಮ್ಮಡಿಹಳ್ಳಿ ರಿಸರ್ಚ್ ಫಾರೆಸ್ಟ್, ಬಾಳದಕಲ್ಲು ಹತ್ತಿರದ ಬಿಟ್ಟೇಶ್ವರ ಲಕ್ಷ್ಮಿಗೌಡರ ತೋಟದ ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡು ಜನರಲ್ಲಿ ಜೀವ ಭಯ ಸೃಷ್ಟಿಸಿವೆ.

## ಸಾಹಿತಿ ಭೈರಪ್ಪ, ಹೋರಾಟಗಾರ ಶಿವಣ್ಣಗೆ ಶ್ರದ್ಧಾಂಜಲಿ

• ಪ್ರಜೋದಯ ವರದಿ

**ಹಾಸನ:** ಅನನ್ಯ ಟ್ರಸ್ಟ್ ವತಿಯಿಂದ ಇಲ್ಲಿನ ಹೇಮಾವತಿ ನಗರದಲ್ಲಿರುವ ರಚನಾ ನಿಲಯದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ.ಶಿವಣ್ಣ ಹಾಗು ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞೆ ಡಾ||ರಂಗಲಕ್ಷ್ಮಿ ಅವರು ಮಾತನಾಡಿ, ನುಗ್ಗೇಹಳ್ಳಿ ಹೋಬಳಿ ಸಂತೇಶಿವರ ಗ್ರಾಮದ ಭೈರಪ್ಪನವರು ತಮ್ಮ ಬರಹಗಳ ಮೂಲಕ ಜಿಲ್ಲೆಯ ಕೀರ್ತಿಯನ್ನು ವಿಶ್ವಮಟ್ಟಕ್ಕೆ ಹೆಚ್ಚಿಸಿದ್ದಾರೆ. ಉಪನ್ಯಾಸಕರಾಗಿ ಬದುಕು ಕಟ್ಟಿಕೊಂಡಿದ್ದ ಅವರು ಗುಜರಾತ್, ದೆಹಲಿ, ಮೈಸೂರಿನಲ್ಲಿ ಕೆಲಸ ಮಾಡಿದ್ದರೂ ಹುಟ್ಟೂರಿನ ಬಗ್ಗೆ ಅತೀವ ಪ್ರೀತಿ ಹೊಂದಿದ್ದರು ಎಂಬುದನ್ನು ಗೃಹಭಂಗ ಕಾದಂಬರಿ ಹಾಗು ಆತ್ಮಕಥೆ ಭಿತ್ತಿ ಅದನ್ನು ಸಾಕ್ಷೀಕರಿಸುತ್ತದೆ. ಓದುಗರನ್ನು ತಮ್ಮೆಡೆಗೆ ಸೆಳೆಯುವ ಕಲೆ ಅವರಿಗೆ ಕರಗತವಾಗಿತ್ತು. ಆದ್ದರಿಂದಲೇ ಕಾದಂಬರಿಗಳು ದಾಖಲೆ ಮಟ್ಟದಲ್ಲಿ ಮಾರಾಟವಾಗುತ್ತಿದ್ದವು. ಕನ್ನಡದಲ್ಲಿ ಮತ್ತೊಬ್ಬ ಅಂತಹ ಲೇಖಕರನ್ನು ನಾವು ಕಾಣಲು ಸಾಧ್ಯವಿಲ್ಲವೆಂದರು.





ಅನನ್ಯ ಟ್ರಸ್ಟ್ ಅಧ್ಯಕ್ಷರಾದ ಕೆ.ಟಿ. ಜಯಶ್ರೀ ಅವರು ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ.ಶಿವಣ್ಣ ಹಾಗು ಸಾಹಿತಿ ಎಸ್.ಎಲ್. ಭೈರಪ್ಪ ಅವರ ಅಗಲಿಕೆಗೆ ತುಂಬಲಾರದ ನಷ್ಟವುಂಟು ಮಾಡಿದೆ. ಶಿವಣ್ಣ ಅವರು 90ರ ಇಳಿ ವಯಸ್ಸಿನಲ್ಲೂ ಸಕ್ರಿಯರಾಗಿದ್ದರು. ಸ್ಕೌಟ್ಸ್-ಗೈಡ್ಸ್ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ನಗರದಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ತಪ್ಪದೇ ಹಾಜರಾಗುತ್ತಿದ್ದರು. » ನಾಲ್ಕನೇ ಪುಟದಲ್ಲಿ

### ವೃತ್ತಿಗೆ ದ್ರೋಹ ಬಗೆಯದಿರಿ | ಅಧಿಕಾರಿಗಳಿಗೆ ನ್ಯಾಯಾಧೀಶರ ಎಚ್ಚರಿಕೆ

# ಪೋಕ್ಸೋ ಕಾಯ್ದೆ ಜಾಗೃತಿ ಮೂಡಿಸಲು ಸೂಚನೆ

• ಪ್ರಜೋದಯ ವರದಿ

**ಹಾಸನ:** ಪೋಕ್ಸೋ ಕಾಯ್ದೆ ಕುರಿತು ಸಾರ್ವಜನಿಕರಿಗೆ ಹೆಚ್ಚಿನ ಅರಿವು ಮೂಡಿಸಲು ಕ್ರಮ ಕೈಗೊಳ್ಳುವಂತೆ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ನ್ಯಾಯಾಲಯ ಸಭಾಂಗಣದಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ ಪೋಕ್ಸೋ ಸಮಿತಿ ಮತ್ತು ಜಿಲ್ಲಾ ಮಟ್ಟದ ಬಾಲ ನ್ಯಾಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳು ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸುವುದರ ಮೂಲಕ ಸಂಕಷ್ಟಕ್ಕೆ ಸಿಲುಕುವವರನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಕರ್ತವ್ಯ ಪ್ರಜ್ಞೆ ಮೆರೆಯಬೇಕು. ಪೋಕ್ಸೋ ಕಾಯ್ದೆ ಅಡಿ ಶಿಕ್ಷೆ ಆಗಿರುವ ಬಗ್ಗೆ ಪತ್ರಿಕೆಗಳಲ್ಲಿ ಪ್ರಚಾರ ಆದರೆ ಜನರಲ್ಲಿ ಸ್ವಲ್ಪ ಭಯ ಬರುತ್ತದೆ. ಇಂತಹ ಪ್ರಕರಣಗಳು ಮರುಕಳಿಸದಂತೆ ತಡೆಯಲು ಸಾಧ್ಯವಾಗುತ್ತದೆ. ವೃತ್ತಿಗೆ ದ್ರೋಹ ಮಾಡಬಾರದು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸಲು ಸೂಚಿಸಿದರು.



ಪ್ರಕರಣಗಳನ್ನು ಕಡಿಮೆ ಮಾಡಲು ಎಲ್ಲರ ಪ್ರಯತ್ನ ಅತ್ಯಗತ್ಯ. ಸಾರ್ವಜನಿಕರಿಗೆ ಕಾನೂನಿನ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು. ಸುಶಿಕ್ಷಿತ ಸಂಸ್ಕಾರ, ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕು. ಇಲ್ಲವಾದರೆ ಮಕ್ಕಳು ಅರಿವಿಲ್ಲದೆ ಕಾನೂನು ಉಲ್ಲಂಘನೆ ಮಾಡುವ ಸಾಧ್ಯತೆ ಹೆಚ್ಚಿರುತ್ತದೆ. ಈ ಬಗ್ಗೆ ಪೋಷಕರು, ಶಿಕ್ಷಕರು, ಸಮುದಾಯ, ಸಮಾಜದ ಎಲ್ಲರೂ ಶ್ರಮಿಸಬೇಕೆಂದು ತಿಳಿಸಿದರು.

ಮಕ್ಕಳನ್ನು ಕೇವಲ ಶಿಕ್ಷಣವಂತರನ್ನಾಗಿ ಮಾಡುತ್ತಿದ್ದೇವೆ ಹೊರತು ಸಂಸ್ಕಾರವಂತರನ್ನಾಗಿ ರೂಪಿಸುತ್ತಿಲ್ಲ. ಅದರ ಪರಿಣಾಮ ಪೋಕ್ಸೋದಂತಹ ಹೀನ ಕೃತ್ಯಗಳು, ಅಪರಾಧಗಳಲ್ಲಿ ಗಣನೀಯ ಏರಿಕೆಯಾಗುತ್ತಿದೆಯೆಂದರು.

ಕರ್ನಾಟಕ ಹೈಕೋರ್ಟ್ ನಿರ್ದೇಶನದ ಮೇರೆಗೆ ಪ್ರತಿ ಜಿಲ್ಲಾ ಮಟ್ಟದಲ್ಲಿ ಪೋಕ್ಸೋ ಸಮಿತಿ ಮತ್ತು ಬಾಲನ್ಯಾಯ ಸಮಿತಿ ರಚಿಸಲಾಗಿದೆ. ಅದರ ಅನ್ವಯ ಪ್ರತಿ ತಿಂಗಳು ಅದಕ್ಕೆ ಸಂಬಂಧಿಸಿದಂತೆ ಪರಿಶೀಲನಾ ಸಭೆ ನಡೆಸಲಾಗುತ್ತಿದ್ದು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು, ಸಮಗ್ರ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಎಲ್ಲರ ಸಮನ್ವತೆಯಲ್ಲಿ ಸಮಿತಿ ರಚಿಸಲಾಗಿದೆ. ನ್ಯಾಯಾಲಯಗಳು ಕೇವಲ ಪ್ರಕರಣಗಳಲ್ಲಿ ವಿಚಾರಣೆಯನ್ನು ನಡೆಸಿ ತೀರ್ಪು ನಡೆಸುವಷ್ಟಕ್ಕೆ ಸೀಮಿತವಾಗದೆ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಿದೆ. » ನಾಲ್ಕನೇ ಪುಟದಲ್ಲಿ

# ಭಾವ ಲಹರಿ


## ಕನ್ನಡ ಕವನಗಳು ★★★★★★

### ನನ್ನ ಮೋಹನ ಮುರಳಿ

ನನ್ನ ಮೋಹನ ಮುರಳಿ
ನನ್ನ ನಾಲಿಗೆಗೆ ಬರಲಿ
ನಿಂತಾಗ ನಲಿವಾಗ
ಕುಣಿವಾಗ ಪದವಾಗ

ಮನಸ್ಸು ನಿನ್ನಲ್ಲೇ ಇರಲಿ
ಊರಲ್ಲಿ ಇರುವಾಗ
ಕಾಯಕವ ಗೈದಾಗ
ನಿನ್ನೊಳಗೆ ನಾನೇ ಇರಲಿ
ತಿರುಗಾಟ ಇರುವಾಗ
ಹಸಿವಿದ್ದು ಉಣುವಾಗ
ನೀಯೆನ್ನ ಬಳಿಯಲ್ಲೆ ಇರಲಿ
ಕಷ್ಟದಲಿ ಇರುವಾಗ
ನಷ್ಟದಲಿ ಕುಳಿತಾಗ
ಮನದಲ್ಲಿ ನೀನೇ ಇರಲಿ
ಜ್ವರ ಬಂದು ಇದ್ದಾಗ
ನಡುಗುತ್ತಾ ಕುಳಿತಾಗ
ಮೈದಡವಿ ಬಳಿಯಲ್ಲೆ ಇರಲಿ
ಎನ್ನ ಮೋಹನ ಹರಿಯೆ
ನನ್ನ ಜೊತೆಗೇ ಇದ್ದು
ಹರಸುತಲಿ ನೆಮ್ಮದಿಯ ತರಲಿ

**- ಹಾ ಮ ಸತೀಶ** ಬೆಂಗಳೂರು



## ಬಲಗೈ ಕೊಟ್ಟಿದ್ದು ಭೈರಪ್ಪರ ಎಡಗೈಗೂ ಗೊತ್ತಾಗಲಿಲ್ಲ!



ನೀವು ನಂಬಬೇಕಿರುವುದು ಕಲೆಯನ್ನೇ ಹೊರತು, ಕಲಾವಿದನನ್ನು ಅಲ್ಲ ಎಂಬುದು ಕಲಾಲೋಕದ ಪ್ರಸಿದ್ಧ ನಾಣ್ಣುಡಿ ಬರೆದಂತೆ ಬದುಕದ, ನುಡಿದಂತೆ ನಡೆಯದ ಕಲಾವಿದರು ತಮ್ಮ ದಾರಿಯನ್ನು ಸಮರ್ಥಿಸಿಕೊಳ್ಳಲು ಇಂಥಾ ಮಾತುಗಳನ್ನು ಕಟ್ಟಿದ್ದಾರೆ. ನುಡಿದಂತೆ ನಡೆಯುವುದು ನೈತಿಕತೆಯ ಮೊದಲ ಪಾಠ. ಆದರೆ, ರಚಿಸುವ ಕೃತಿಯನ್ನು ಬರೆಯುವ ಸಾಹಿತ್ಯವನ್ನು ಕೇವಲ ಶಬ್ದ ಚಮತ್ಕಾರ ಎಂದು ಭಾವಿಸಿರುವ ಕಲಾವಿದರ ಆಳದಲ್ಲಿ ಆತ್ಮಹೀನನೇ ಆಗಿರುತ್ತಾನೆ. ನಮ್ಮಲ್ಲಿ ಬಹುತೇಕ ಸಾಹಿತಿಗಳು, ಕಲಾವಿದರು ಇರುವುದೇ ಹೀಗೆ. ಆದರೆ, ಕನ್ನಡದ ಖ್ಯಾತ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ ಈ ಮಾತಿಗೆ ಅಪವಾದವೆಂಬಂತೆ ಬಾಳಿ ಬದುಕಿ ಹೋದರು.


ಸಾಹಿತ್ಯದಿಂದ ಕ್ರಾಂತಿ ಮಾಡಬಹುದು, ಸಮಾಜ ಸುಧಾರಣೆ ಮಾಡಬಹುದು ಎಂಬುದು ನಮ್ಮ ಬಹುತೇಕ ಸಾಹಿತಿಗಳ ನಂಬಿಕೆ. ಆದರೆ, ಭೈರಪ್ಪ ಈ ಮಾತನ್ನು ಒಪ್ಪುತ್ತಲೇ ಇರಲಿಲ್ಲ ಸಾಹಿತಿ ತನ್ನ ವೈಯಕ್ತಿಕ ಬದುಕಿನಲ್ಲಿ ತನ್ನ ಶಕ್ತಿ ಸಾಮರ್ಥ್ಯದ ಇತಿಮಿತಿಯಲ್ಲಿ ಸಮಾಜಕ್ಕೆ ಉಪಕಾರ ಮಾಡಬಹುದು ಎಂಬುದನ್ನು ಬರೆಯಲಿಲ್ಲ. ಬದಲಿಗೆ ಆಗು ಮಾಡಿ ತೋರಿಸಿದರು ಹುಟ್ಟೂರಾದ ಸಂತೇಶಿವರದ ಜನ ನೀರಿಲ್ಲದೆ ಕಡುಕಷ್ಟ ಪಡುತ್ತಿರುವುದನ್ನು ಕಂಡು ಭೈರಪ್ಪ ಕೇವಲ ಮರುಗಲಿಲ್ಲ, ತಮ್ಮ ತಾಯಿ ಗೌರಮ್ಮನ ಹೆಸರಿನಲ್ಲಿ ಪ್ರತಿಷ್ಠಾನ ಮಾಡಿ, ನೀರಿನ ಸಮಸ್ಯೆಗೆ ಪರಿಹಾರ ಕಂಡಕೊಳ್ಳಲು ಪ್ರಾಮಾಣಿಕ ಪ್ರಯತ್ನ ನಡೆಸಿದರು. (ಚಿತ್ರ ನೋಡಿ) ನೀರಿನ ಸಮಸ್ಯೆ ಕೈಮೀರಿ, ಸರಕಾರವೇ ಮಧ್ಯಪ್ರವೇಶಿಸಬೇಕು ಎಂದಾಗ, ಅದಕ್ಕೂ ಅವರು ಹಿಂಜರಿಯಲಿಲ್ಲ. ಸರಕಾರಿ ಸ್ಥಾನ-ಮಾನ, ಪ್ರಶಸ್ತಿ, ಗೌರವ, ಬಡ್ತಿ ಮತ್ತಿತರ ಸೌಲಭ್ಯಗಳಿಗಾಗಿ ಅಧಿಕಾರಸ್ಥರ ಬಳಿ ತೆರಳುವುದು ಸಾಹಿತಿಗಳು ಮಾಡುವ ಕೆಲಸವಲ್ಲ ಎಂದು ನಂಬಿದ್ದ ಭೈರಪ್ಪ, ತನ್ನ ಸೀಮೆಯ ಜನರಿಗಾಗಿ ಮುಖ್ಯಮಂತ್ರಿಯನ್ನು ಕಂಡರು.

ಊರ ದೇಗುಲದ ಜೀರ್ಣೋದ್ಧಾರಕ್ಕಾಗಿ ದೇಣಿಗೆ ನೀಡಿದರು. ನೋವು, ಬಡತನ, ಅಪಮಾನ, ರೋಗ ರುಜಿನ, ವಾರಾನ್ನ- ಹೀಗೆ ಎಲ್ಲ ಸವಾಲುಗಳನ್ನು ಬಾಲ್ಯದಲ್ಲಿಯೇ ಎದುರಿಸಿದ್ದ ಭೈರಪ್ಪ ತಮ್ಮ ಬದುಕಿನುದ್ದಕ್ಕೂ ಇಂಥಾ ಸವಾಲು ಎದುರಿಸುವ ಜನರಿಗಾಗಿ ಮಿಡಿದರು. ಅನಾಥ ಹಾಗೂ ಬೀದಿಬದಿ ಹೆಣ್ಣು ಮಕ್ಕಳಿಗೆ ಪುನರ್ವಸತಿ ಕಲ್ಪಿಸಲು ಮೈಸೂರಿನಲ್ಲಿ ಒಡನಾಡಿ ಸಂಸ್ಥೆ ಆರಂಭವಾದಾಗ, ಸಂಸ್ಥೆಯನ್ನು ಬೆಂಬಲಿಸಿ ಉದಾರವಾಗಿ ದೇಣಿಗೆ ನೀಡಿದರು. ಉಡುಪಿಯ ಹೆಣ್ಣು ಮಗಳೊಬ್ಬಳು ತಾಯಿ ಜತೆ ಬೀದಿಗೆ ಬಿದ್ದಿದ್ದಾಳೆ. ಆ ಮಗುವಿಗೆ ಓದಲು ಹಣಕಾಸಿನ ನೆರವು ಸಿಗುತ್ತಿಲ್ಲ ಎಂದು ಪತ್ರಿಕೆಯಲ್ಲಿ ಓದಿ ತಿಳಿದ ಭೈರಪ್ಪ, ಅವರಿಬ್ಬರನ್ನೂ ಸಂಪರ್ಕಿಸಿ ವಿದ್ಯಾಭ್ಯಾಸಕ್ಕೆ ನೆರವು ಕಲ್ಪಿಸಿದರು.

ಕೆಲವು ವರ್ಷಗಳ ಹಿಂದೆ ಅಸ್ಸಾಂನ ಸಂಘವೊಂದು ಅವರಿಗೆ ಭಾರಿ ಮೊತ್ತದ ನಗದು ಸಹಿತ ಬಹುಮಾನ ನೀಡಿ ಗೌರವಿಸಿತು. ಭೈರಪ್ಪ ನಗದು ಹಣವನ್ನು ಬಡಮಕ್ಕಳಿಗೆ ವಿನಿಯೋಗಿಸಿ ಎಂದು ವಾಪಸ್ ನೀಡಿದ್ದರು. ಹಾಗೆ ನೋಡಿದರೆ ಭೈರಪ್ಪ ತಮಗೆ ಬಂದ ಪ್ರಶಸ್ತಿಯ ಮೊತ್ತವನ್ನು ಯಾವತ್ತೂ ಮನೆಗೆ ತರುತ್ತಿರಲಿಲ್ಲವಂತೆ ಅದನ್ನು ಒಳ್ಳೆಯ ಕೆಲಸ ಮಾಡುವ ಸಂಘಸಂಸ್ಥೆಗಳಿಗೆ ದೇಣಿಗೆ ನೀಡುತ್ತಿದ್ದರು. ಹೀಗೆ ನೆರವು ನೀಡುವಾಗ ಸಂಬಂಧಿಸಿದ ಸಂಘಸಂಸ್ಥೆಯ ಪ್ರಾಮಾಣಿಕತೆಯನ್ನು ನೋಡುತ್ತಿದ್ದರೆ ವಿನಾ ಆ ಸಂಘ ಸಂಸ್ಥೆಗಳ ಸೈದ್ಧಾಂತಿಕ ಇಲ್ಲವೇ ರಾಜಕೀಯ ಒಲವು ನಿಲುವುಗಳನ್ನಲ್ಲ, ಭೈರಪ್ಪ ಸಹಾಯ ಮಾಡಿದ್ದು ದೊಡ್ಡ ಸಂಗತಿಯಲ್ಲ, ತಾವು ಮಾಡಿದ ಸಹಾಯವನ್ನು ಅವರು ಯಾವತ್ತೂ ಮಾಧ್ಯಮಗಳ ಮೂಲಕ ಪ್ರಸಾರ ಮಾಡಲಿಲ್ಲ. ಬಲಗೈನಲ್ಲಿ ಕೊಟ್ಟಿದ್ದು ಎಡಗೈಗೂ ಗೊತ್ತಾಗದಂತೆ ಈ ಕೆಲಸ ಮಾಡಿದರು. ಬರಹಕ್ಕಿಂತ ಬದುಕು ದೊಡ್ಡದು. ಭೈರಪ್ಪ ಅವರ ಬರಹದಷ್ಟೇ ಬದುಕೂ ದೊಡ್ಡದು.

## ಹೊಸ ದಾರಿ

ತುಂಬ ಬೇಸರವಾಗಿ ಗೋಡೆಗೆ ತಲೆಯ ಒರಗಿಸಿ ಹಾಗೆ ಮೇಲೆ ನೋಡುತ್ತಾ ಆತ ಕುಳಿತಿದ್ದಾನೆ. ಆತ ತನ್ನ ಜೀವನದಲ್ಲಿ ಎಲ್ಲವನ್ನ ಕಳೆದುಕೊಂಡವ, ಮನೆಯವರನ್ನ ಮಡದಿಯನ್ನ ಮಕ್ಕಳನ್ನು ಕನಸುಗಳನ್ನು ಆಸೆಗಳನ್ನ, ನಂಬಿದ ಕೆಲಸವನ್ನು ಹೀಗೆ ಎಲ್ಲವನ್ನ ಕಳೆದುಕೊಂಡು ಏಕಾಂಗಿಯಾಗಿ ಕುಳಿತುಬಿಟ್ಟಿದ್ದಾನೆ. ಪ್ರತಿದಿನವೂ ಕುಳಿತು ತನ್ನ ಜೀವನದಲ್ಲಿ ನಡೆದು ಹೋದ ಘಟನೆಗಳನ್ನ ಯೋಚಿಸುತ್ತಾ ಯೋಚಿಸುತ್ತಾ ಭವಿಷ್ಯವನ್ನು ಮುರಿದುಬಿಟ್ಟಿದ್ದಾನೆ. ಆತನಿಗೆ ಯಾರೆಷ್ಟೇ ಹೇಳಿದರೂ ಆತ ಒಂದು ಕ್ಷಣ ಕೇಳಿ ಮತ್ತೆ ಅದೇ ಯೋಚನೆಯಲ್ಲಿ ದಿನದೊಡುತ್ತಿದ್ದಾನೆ. ಆತನ ಕೈಗೆ ಆತನ ಗೆಳೆಯ ಪುಸ್ತಕ ಒಂದನ್ನು ನೀಡಿ ಹೊರಟುಹೋದ. ಈತನಿಗೆ ಸಮಯ ದಾಟಬೇಕಿತ್ತು. ಪುಸ್ತಕದೊಳಗೆ ಓದುವಿಕೆಯನ್ನು ಆರಂಭಿಸಿದ ಹಾಗೆ ಪ್ರತಿಪುಟಗಳನ್ನ ತಿರುವುತ್ತಾ ಹೋದ ಹಾಗೆ ಉತ್ಸಾಹ ಹೆಚ್ಚಾಗುತ್ತಾ ಹೋಯಿತು. ಆಸಕ್ತಿ ಹುಟ್ಟಿತು. ಪುಟ 108ಕ್ಕೆ ತಲುಪುವಾಗ ಕಥೆ ಕೌತುಕದ ಹಂತಕ್ಕೆ ತಲುಪಿತ್ತು. ಅಲ್ಲಿ ಬಂದ ಪಾತ್ರ ಒಂದರ ಸನ್ನಿವೇಶದ ತಿರುವಿಕೆಗೆ ಹಿಂದಿನೆರಡು ಪುಟಗಳ ವಿವರಣೆ ಅಗತ್ಯವಿತ್ತು. ತಕ್ಷಣದಲ್ಲಿ ಹಿಂದಿನ ಪುಟಕ್ಕೆ ತಿರುಗಿದಾಗ ಎಲ್ಲ ಪುಟಗಳು ಖಾಲಿಯಾಗಿ ಬಿಟ್ಟಿದ್ದವು. ಯಾವ ಪುಟದಲ್ಲೂ ಅಕ್ಷರಗಳ ಕುರುಹೇ ಇರಲಿಲ್ಲ. ಈಗ ಕಥೆಯನ್ನು ಮುಂದುವರಿಸಲೇಬೇಕಿತ್ತು ಏನು ಮಾಡದೆ ಕಥೆಯನ್ನು ಮುಂದುವರಿಸುತ್ತಾ ಮುಂದುವರಿಸುತ್ತಾ ಹೋದ ಹಾಗೆ ಕೌತುಕತೆಯ ಸನ್ನಿವೇಶಗಳು ಸೃಷ್ಟಿಯಾಗುತ್ತಾ? ಓದಿಗೆ ಸಾರ್ಥಕ್ಯ ಸಿಕ್ಕಿತು ಇಡೀ ಪುಸ್ತಕವನ್ನು ಮುಗಿಸಿ ಹೊಸ ಪುಸ್ತಕದ ಕಡೆಗೆ ಹೊರಟ. ಆಗ ಅವನಿಗೆ ಬದುಕು ಅರ್ಥವಾಗಿತ್ತು. ಹಿಂದಿನದ್ದನ್ನೇ ಯೋಚಿಸುತ್ತಾ ಕುಳಿತರೆ ಅದರಿಂದ ಏನೂ ಪ್ರಯೋಜನವಿಲ್ಲ ಹೊಸ ದಾರಿಯ ಹುಡುಕುತ್ತಾ ಹೋದರೆ ಖಂಡಿತ ಬದುಕಿಗೆ ಇನ್ನೊಂದು ಹೊಸ ಅವಕಾಶಗಳು ಸಿಕ್ಕೇ ಸಿಗುತ್ತದೆ ಅಂತ..



# ಹೊಟ್ಟೆಪಾಡು ಯೋಚಿಸಲಿಲ್ಲ ಸಾಹಿತ್ಯವೇ ಜೀವನವೆಂದರು!

ನಾನೂ ಹಠ ಹಿಡಿದು ಇವರ ಜತೆ ಟೂರ್ ಹೋಗ್ತಿನಿ ಅಂತ ಇಟ್ಕೊಳ್ಳಿ, ದಾರೀಲಿ ಯಾವುದೋ ನದಿಯೋ, ಬೆಟ್ಟವೋ ಕಾಣಿಸುತ್ತೆ... ಇವರು ಅದನ್ನೇ: ನೋಡ್ತಾ ಗಂಟೆ ಗಟ್ಟಲೆ ಆ ಸ್ಥಳದಲ್ಲೇ ನಿಂತುಬಿಡ್ತಾರೆ.... ಮಾತಿಲ್ಲ ಕತೆಯಿಲ್ಲ. ನಂಗೆ ಅವು ಕೇವಲ ಒಂದು ನದಿ ಅಥವಾ ಬೆಟ್ಟ. ಆದರೆ ನನ್ನ ಗಂಡ ಅವುಗಳಲ್ಲೆಲ್ಲ ನನ್ನ ಯೋಚನಾ ಶಕ್ತಿಗೆ ಮೀರಿದ ಯಾವುದನ್ನೋ ಕಾಣ್ತಿರ್ತಾರೆ ಎನ್ನುತ್ತಾರೆ ಸರಸ್ವತಿ ಭೈರಪ್ಪ. ಅವರು ಎಸ್.ಎಲ್ ಭೈರಪ್ಪ ಅವರ ಕುರಿತು ಹಂಚಿಕೊಂಡ ಮಾತುಗಳಿವು. ''ಮದುವೆಯಾದ ದಿನದಿಂದಲೂ ನಾನು ಒಂಟಿತನಾನ ಅಭ್ಯಾಸ ಮಾಡಿಕೊಂಡಿರುವುದರಿಂದ ನನಗೆ ಅದರಲ್ಲಿ ವಿಶೇಷವೇನೂ ಕಾಣೋಲ್ಲ....'' ಸರಸ್ವತಿ ನಗುತ್ತಲೆ ನುಡಿಯುತ್ತಾರೆ. ಆದರೆ ಈ ಏಕಾಕಿತನವನ್ನು ಅನುಭವಿಸುವುದರ ಹಿನ್ನೆಲೆಯಲ್ಲೇ ಮಹದಾಕಾಂಕ್ಷೆಯ, ಮಹತ್ತರ ಕೃತಿಗಳ ಲೇಖಕರಾದ ತಮ್ಮ ಪತಿಯ ಬಗ್ಗೆ ಅಭಿಮಾನವೂ ಪರೋಕ್ಷವಾಗಿ ಒಡಮೂಡುತ್ತದೆ. ಮೈಸೂರಿನ ದೊಡ್ಡ ಮನೆ. ಹಲವಾರು ವರ್ಷಗಳಿಂದಲೂ ಇಲ್ಲಿ ಶಕ್ತಿಮೀರಿ ಬದುಕನ್ನು ಸಮರ್ಪಕವಾಗಿ ನಡೆಸುತ್ತಾ ಬಂದಿರುವ ಸರಸ್ವತಿ.

ಅವರ ಕೃತಿಗಳ ವಸ್ತುಗಳು ಎಷ್ಟು ಅಪರೂಪವೋ ಅಷ್ಟೇ ಜನರ ಕಣ್ಣಿಗೂ ಅಪರೂಪಕ್ಕೊಮ್ಮೆ ವೇದಿಕೆಗಳಲ್ಲಿ ಕಾಣಿಸಿಕೊಳ್ಳುವ ಭೈರಪ್ಪನವರ ವ್ಯಕ್ತಿತ್ವದ ವೈಯಕ್ತಿಕ ಮಗ್ಗುಲನ್ನು ತಿಳಿಯುವ ಉತ್ಸಾಹದಿಂದ ಅವರ ಮನೆಗೆ ಹೋದಾಗ ಅಲ್ಲಿ ಕಾಣಿಸಿಕೊಳ್ಳುವವರು ಸರಸ್ವತಿ ಮಾತ್ರ. ವಿದೇಶ ಪ್ರವಾಸಕ್ಕೆ ಹೋಗಿರುವ ಪತಿಯ ಬರುವಿಕೆಯನ್ನೇ ನಿರೀಕ್ಷಿಸುತ್ತ ದೂರದಲ್ಲಿರುವ ಮಕ್ಕಳ ಟೆಲಿಫೋನ್ ಕರೆಗಳಿಗಾಗಿ ಕಾಯುತ್ತಾ ಕೂತಿರುವ ಭೈರಪ್ಪನವರ ಪತ್ನಿ ಸರಸ್ವತಿ.

''ನಾನು ಮೆಟ್ರಿಕ್‌ವರೆಗೆ ಮಾತ್ರ ಓದಿದವಳು. ನನ್ನಪ್ಪ ಅನಂತರಾಮ ಜೋಯಿಸರು ಎಷ್ಟು ಕಟ್ಟುನಿಟ್ಟಿನ ಮನುಷ್ಯ ಅಂದ್ರೆ, ನಾನು ಸಣ್ಣ ವಯಸ್ಸಿನಲ್ಲಿ ಹೊರಗೆ ಹೋದವಳೇ ಅಲ್ಲ. ಚಿಕ್ಕ ವಯಸ್ಸಿನಲ್ಲಿ ಬುದ್ಧಿ ಬೆಳೆಯೋಕೇ ಅವಕಾಶ ಇರಲಿಲ್ಲ ನೋಡಿ'' ಎಂದೇ ತಮ್ಮ ವೃತ್ತಾಂತವನ್ನು ಪ್ರಾರಂಭಿಸುವ ಸರಸ್ವತಿ, ಸಂಭಾಷಣೆ ಬೇರೆ ಬೇರೆ ಮಜಲುಗಳನ್ನು ಮುಟ್ಟುತ್ತಿದ್ದಂತೆಯೇ ವ್ಯಕ್ತಪಡಿಸುವ ವಿಚಾರಗಳು ಮಾತ್ರ ಸ್ವಾರಸ್ಯಕರ. ಸಾರಸ್ವತ ಲೋಕದ ಅಗ್ರಗಣ್ಯರಲ್ಲೊಬ್ಬರಾದ ಪತಿಯನ್ನು ವಸ್ತುನಿಷ್ಠರಾಗಿ ಪರಿಚಯಿಸಿಕೊಡುವಂಥ ಮೋಹಕ ಮಾತುಗಾರಿಕೆ.

''ನನ್ನಪ್ಪ ಅನಂತರಾಮ ಜೋಯಿಸರು ಅಂತ ಆಗಲೇ ಹೇಳಿದೆನಲ್ಲ, ತಾಯಿ ಜಯಲಕ್ಷಮ್ಮ, ನಾವು ತಿಪಟೂರು ತಾಲ್ಲೂಕಿನ ನೊಣವಿನಕೆರೆಯವರು. ನನ್ನ ತಾತ-ಅಂದರೆ ನನ್ನ ತಾಯಿಯ ತಂದೆ ತಲಕಾಡಿನಲ್ಲಿ ಶಿರಸ್ತೇದಾರರು. ಅದರ ಜತೆಗೇ ಜೋಯಿಷ್ಯಕ್ಕೇಂತ ನಲವತ್ತು ಹಳ್ಳಿಗಳನ್ನು ಒಂದು ಸಾವಿರ ರೂಪಾಯಿಗೆ ಕೊಂಡುಕೊಂಡಿದ್ದರಂತೆ. ನೊಣವಿನಕೆರೆ ಸುತ್ತಮುತ್ತಲಿನ ಹಳ್ಳಿಗಳಲ್ಲೆಲ್ಲ ತಾತಂದು ಓಡಾಟ. ಅಪ್ಪನಿಗೆ ಭೂಮಿಕಾಣಿ ಆಸ್ತಿಯಾಗಿ ಬಂತು. ಅದಲ್ಲದೆ ಜೋಯಿಸಿಕೆ ಕೂಡಾ. ನನ್ನ ತಾತನ ಕಾಲಕ್ಕಿಂತಲೂ ಅಪ್ಪನ ಕಾಲ ಮುಂದುವರಿದೇ ಇರಬೇಕಲ್ಲ ಅಪ್ಪನಿಗೆ ಜೋಯಿಸಿಕೆ ಮಾಡೋದು ಅವಮಾನ, ದಾನ ತೊಗೊಳ್ಳೋದು ಕರ್ಮ. ತಾನು ದುಡಿದು ತಿನ್ನಬೇಕೇ ಹೊರತು ಕಂಡವರ ಮನೇಲಿ ಹೊಟ್ಟೆ ಹೊರೆದುಕೋಬಾರದು ಅಂತ ಏನೇನೋ ಯೋಚನೆ ಬಂದು ತಮ್ಮ ತೆಂಗಿನ ತೋಟ, ಗದ್ದೆ ಇವನ್ನೇ ಮುಂದುವರಿಸಕೊಂಡು ಹೋದರು. ಒಂದು ಕಾಲಕ್ಕೆ ಕಾಂಗ್ರೆಸ್‌ಗೂ ಕೆಲಸ ಮಾಡಿದ್ದುಂಟು. ತಿಮ್ಮೇಗೌಡ, ಹುಚ್ಚೇಗೌಡ, ವಿ ಸುಬ್ರಹ್ಮಣ್ಯ, ಕಡಿದಾಳ್ ಮಂಜಪ್ಪ, ರೇವಣಸಿದ್ದಯ್ಯ ಇಂಥಹವರು ಚುನಾವಣೆಗೆ ನಿಂತಾಗ; ಆದರೆ ಜಾತಿ ರಾಜಕೀಯ ಶುರುವಾದಾಗ ಅಪ್ಪ ರಾಜಕಾರಣದಲ್ಲಿ ಇದ್ದ ಅಲ್ಪಸ್ವಲ್ಪ ಅಸಕೀನೂ ಕಳೆದುಕೊಂಡರು. ಅವರಾಯ್ತು ಅವರ ಬೇಸಾಯವಾಯ್ತು ಮನೇಲಿ ಅವರದ್ದೇ ಹುಕುಂ. ಅಪ್ಪನಿಗೆ ಗಂಡು ಮಕ್ಕಳಿಲ್ಲ ನಾನು, ನನ್ನ ಇಬ್ಬರು ತಂಗಿಯರು. ಪಕ್ಕದ ಮನೆಗೆ ಆರಸಿನ ಕುಂಕುಮಕ್ಕೆ ಹೋಗಬೇಕಾದರೂ ಅಪ್ಪನ ಕಣ್ತಪ್ಪಿಸಿ, ಕದ್ದು ಹೋಗಬೇಕಾಗಿತ್ತು. ನಾವೆಲ್ಲೂ ಹೋಗಬಾರದು. ಬರಬಾರದು. ನಾನು 19ನೇ ವಯಸ್ಸಿನವರೆಗೂ ರೈಲನ್ನೇ ನೋಡಿರಲಿಲ್ಲ. ಆದ್ರೂ ಅಪ್ಪನಿಂದ ಮರೆಮಾಚಿ ಲೈಬ್ರರಿಗೆ ಓಡಿಹೋಗಿ ಅಮ್ಮನಿಗೆ ತ.ರಾ.ಸು. ಅ.ನ.ಕೃ. ಕಾದಂಬರಿಗಳನ್ನು ತಂದೊಡ್ತಾ ಇದ್ದೆವು. ಅಮ್ಮನಿಗೋ ಓದೋ ಹುಚ್ಚು. ಮೈಸೂರು ಮಹಾರಾಣಿ ಸ್ಕೂಲಿನಲ್ಲಿ 7ನೇ ಕ್ಲಾಸಿನವರೆಗೂ ಓದಿದ್ದರು. ಅಪ್ಪ ಮನೆ ಖರ್ಚಿಗೆ ಅಂತ ಕೊಡ್ತಿದ್ದ ದುಡ್ಡಿನಲ್ಲಿ 8 ಆಣೆ ಉಳಿಸ್ಕೊಂಡು ನಮಗೆ ''ಚಂದಮಾಮ'' ತರಿಸಿ ಕೊಡ್ತಿದ್ದರು.''

''ನಂಗೆ 16 ವರ್ಷ ಆಗ್ತಿದ್ದಹಾಗೇ ಗಂಡು ಹುಡುಕೋಕ್ಕೆ ಶುರು ಮಾಡಿದರು. ಲಾಯರು, ಡಾಕ್ಟರು, ಎಂಜಿನಿಯರು ಹೀಗೆ ವರಗಳು ಬಂದವು. ಆದ್ರೆ ಓದಿದ ಹುಡುಗಿ ಅಲ್ಲ ಅಂತ ನನ್ನನ್ನು ಅವರಾರೂ ಒಪ್ಪಲಿಲ್ಲ. ನನ್ನ ಜತೆ ಓದುತ್ತಾ ಇದ್ದ ಒಬ್ಬ ಹುಡುಗ ಹೊಯ್ಸಳ ಕರ್ನಾಟಕರ ಹಾಸ್ಟೆಲ್ಲಿನಲ್ಲಿದ್ದಾಗ ಭೈರಪ್ಪನವರ ಸ್ನೇಹಿತನಾಗಿದ್ದ. ''ಭೈರಪ್ಪ ಅಂತ ಬಿ.ಎ. ಆನರ್ಸ್‌ನಲ್ಲಿ ಒಬ್ಬನಿದ್ದಾನೆ. ನೋಡ್ತೀರಾ?'' ಅಂತ ಅಪ್ಪ ಅಮ್ಮನ್ನ ಕೇಳಿದ. ಸರಿ, ಇವರು ಎಚ್. ಟಿ. ಶಾಂತಾ ಅಂತ ಫಿಲಾಸಫಿ ಪ್ರೊಫೆಸರಾಗಿದ್ದ ಒಬ್ಬಾಕೆ ಜತೆ ನನ್ನ ನೋಡೋಕೆ ಬಂದರು. ಭೈರಪ್ಪನವರಿಗೆ ಹೇಳಿಕೊಳ್ಳುವಂಥ ಸಂಬಂಧಿಕರೇನೂ ಇರಲಿಲ್ಲ. ಜತೆಯಲ್ಲಿ ಹುಟ್ಟಿದವಳು ಒಬ್ಬಳೇ ತಂಗಿ, ಲಲಿತಾ ಅಂತ. ಇವರ ತಾಯಿ-ಗೌರಮ್ಮ-ಅಷ್ಟು ಹೊತ್ತಿಗಾಗಲೇ ತೀರಿಕೊಂಡಿದ್ದರು. ತಂದೆ ಲಿಂಗಣ್ಣಯ್ಯ, ಸಂತೆಶಿವರ ಇವರ ಊರು. ಹೆಸರಿಗೆ ಮಾತ್ರ ಶ್ಯಾನುಭೋಗರು. ಎಂದೂ ಶ್ಯಾನುಭೋಗಿಕೇನ ಸರಿಯಾಗಿ ನಡೆಸಲೇ ಇಲ್ಲ. ತೀರಾ ಬೇಜವಾಬ್ದಾರಿ ಮನುಷ್ಯ, ಭೈರಪ್ಪ ವಾರಾನ್ನ, ಭಿಕ್ಷಾನ್ನದಿಂದ ದೊಡ್ಡರಾದವು. ತಂಗಿಯ ಜವಾಬ್ದಾರೀನೂ ಭೈರಪ್ಪನವರ ಹೆಗಲಿಗೇ ಬಿದ್ದಿತ್ತು. ಇವರ ''ಗೃಹಭಂಗ'' ಕಾದಂಬರಿಗೆ ತಮ್ಮ ತಂದೆಯ ವರ್ತನೆಯೇ ಪ್ರೇರಣೆ.''

**ತೀವ್ರ ಹಂಬಲ:** 1959ರಲ್ಲಿ ನೊಣವಿನಕೆರೆಯಲ್ಲಿ ನಮ್ಮ ಮದುವೆಯಾಯಿತು. ನಂಗೆ 20 ವರ್ಷ, ಇವರಿಗೆ 25. ನಮ್ಮ ಮದುವೆ ಗೊತ್ತು ಮಾಡಿದ್ದರಲ್ಲಾ, ಪ್ರೊ. ಶಾಂತಾ, ಅವರು ಆವತ್ತೇ ನಂಗೆ ಹೇಳಿದರು ನೋಡು, ಭೈರಪ್ಪ ಯಾವಾಗಲೂ ಬರೀತಾ ಕೂತುಕೊಳ್ಳೋನು. ನೀನು ಅವನಿಗೆ ಸಹಕಾರ ನೀಡಬೇಕೇ ಹೊರತು ಎಂದೂ ಮನಸ್ತಾಪಕ್ಕೆ ಕಾರಣ ಆಗಬಾರದು ಅಂತ. ಇವರು ಆಗ ಹುಬ್ಬಳ್ಳಿಯ ಕಾಡುಸಿದ್ದೇಶ್ವರ ಆರ್ಟ್ಸ್ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದರು. ಬಡತನ ಹೇಳತೀರದು. ಇವರು ಅಂಥ ಸ್ಥಿತಿಯಲ್ಲೇ ತಂಗಿಗೆ ಮದುವೆ ಮಾಡಿದರು. ಆದರೆ ಎಂಥಾ ದುರದೃಷ್ಟ ಅಂತೀರೀ.... ಅವಳನ್ನು ಮದುವೆಯಾದವನು ಸರಿಯಾಗಿರಲಿಲ್ಲ.



ಸರಸ್ವತಿ ಮತ್ತು ಎಸ್.ಎಲ್. ಭೈರಪ್ಪ

ಸಂಗೀತವೇ ಸೇರದು. ಆದರೆ ಇವರಿಗೆ ಅದನ್ನು ಕೇಳಲೇಬೇಕು. ಸಂಜೆ ಇವರು ಕಾಲೇಜು ಮುಗಿಸಿಕೊಂಡು ಬರುವಷ್ಟರಲ್ಲಿ ಡಬ್ಬಿಲಿ ಚಪಾತಿ ಪಲ್ಯ ಇಡ್ಕೊಂಡು ಕಚೇರಿಗೆ ಹೋಗೋ ದಾರೀಲಿ ನಿಂತಿದ್ದಾ ಇದ್ದೆ. ಇವರು ತಿಂಡಿ ತಿಂದು, ನಾನು ಹಾಗೂ ನನ್ನ ಮಗನನ್ನು ಸೈಕಲ್ ಮೇಲೆ ಕೂರಿಸಿಕೊಂಡು ಹೋಗ್ತಿದ್ರು. ಸಭಾಂಗಣಕ್ಕೆ ಹೋದಾಗ ನಂಗೆ ಸಾಕಷ್ಟು ತಿಳುವಳಿಕೆ ಕೊಡ್ತಿದ್ದರು - ಹಾಡುತ್ತಾ ಇರೋರು ಇಂಥ ಊರಿನವು, ಅವರ ಮುಖ ಕಟ್ಟು ಹೀಗಿದೆ. ಈಗ ಈ ರಾಗ ಹೇಳುತ್ತಾ ಇದಾರೆ, ಅಂತಲ್ಲ. ಸ್ವಲ್ಪ ಸಂಗೀತ ಜ್ಞಾನ ನನ್ನಲ್ಲೂ ಹುಟ್ಟಿತ್ತು.

''ಇವರು ಬೆಳಿಗ್ಗೆ ನನ್ನ ಮಗನಿಗೆ ನೀರು ಹಾಕಿ ಆರು ಗಂಟೆಗೆ ಕೆಲಸಕ್ಕೆ ಹೊರಟರು ಅಂದರೆ ಇಡೀ ದಿನ ನಂಗೆ ಬಟ್ಟೆ ಒಗೆಯೋದು, ಪಾತ್ರೆ ತೊಳೆಯೋದು, ಮಗೂನ ಆಡಿಸೋದು ಇಷ್ಟೆ. ಮದುವೆಯಾಗೋಕ್ಕೆ ಮೊದಲೇ ಸ್ವಲ್ಪ ಹಿಂದಿ ಓದಿದ್ದೆ. ಗುಜರಾತ್‌ಗೆ ಬಂದ ಮೇಲೆ ಇಂಗ್ಲಿಷ್, ಹಿಂದಿ, ಗುಜರಾತಿ ಮೂರು ಭಾಷೆಗಳನ್ನೂ ಮಾತನಾಡಲು ಕಲಿತು, ಹಿಂದಿ ಪೇಪರ್ ಓದ್ಕೋತಿದ್ದೆ. ಆದರೆ ಗುಜರಾತ್‌ಗೆ ಹೋದೆವು ಅಂತ ನಮ್ಮ ಕಷ್ಟ ಕಾರ್ಪಣ್ಯವೇನೂ ಮುಗಿದಿರಲಿಲ್ಲ, ಇವರು ಪಿಎಚ್.ಡಿ ಮಾಡ್ತಿದ್ದಾಗ ಯೂನಿವರ್ಸಿಟಿಗೆ ಬೇರೆ ದುಡ್ಡು ಕಟ್ಟಬೇಕಾಗಿತ್ತು. ಮನೇಲಿ ಒಂದು ಇಂದ್ರೆ, ಒಂದಿಲ್ಲ. ಯಾವಾಗಲೋ ಎರಡು ರೂಪಾಯಿ ಉಳಿತಾಯವಾದಾಗ ಎರಡು ಲೋಟ ಕೊಂಡ್ಕೊಂಡಿದ್ದಾಯಿತು. ಮತ್ತೆ ಯಾವಾಗಲೋ ಹತ್ತು ರೂಪಾಯಿ ಉಳೀತು. ಆಗ ಊಟದ ತಟ್ಟೆ ಕೊಂಡೆವು. ಹಿತ್ತಾಳೆ ಪಾತ್ರೆಲಿ ಹಾಲು ಕಾಯಿಸ್ತಾ ಇದ್ದೆ ಕಣೇ.... ಯಾರೋ ಹೇಳಿದರು ಅದು ತಪ್ಪು ಅಂತ. ಆಗ ಇವರನ್ನು ಕಾಡಿ ಬೇಡಿ ಹಾಲಿಗೆ ಒಂದು, ಸಾರಿಗೆ ಒಂದು ಅಂತ ಎರಡು ಸ್ಟೀಲ್ ಪಾತ್ರೆಗಳನ್ನು ಕೊಂಡೆ. ಒಂದೊಂದು ಸಾಮಾನು ಕೊಳ್ಳೋದೂ ಒಂದೊಂದು ಪ್ರಯಾಸ. ಹಾರೆ, ಬಾಂಡಲಿ ಇಂಥವನ್ನು ಕೊಳ್ಳೋಕೂ ಎಷ್ಟು ಕಷ್ಟ ಪಟ್ಟಿದ್ದೀನಿ ಅಂತಾ. ಸೀರೆಯಂತೂ ಬಿಡಿ. ವರ್ಷಕ್ಕೊಂದಾದರೆ ಹೆಚ್ಚು. ಇವರಿಗೆ ತಾನೆ ಎಷ್ಟು ಬಟ್ಟೆ ಇತ್ತು! ಮೂರು ಪಾಯಿಜಮ, ಮೂರು ಜುಬ್ಬಾ, ಮೂರು ಬನಿಯನ್, ಎಣಿಸಿದ ಹಾಗೆ. ಇವರಿಗೆ ಮದುವೆಯಲ್ಲಿ ಕೊಟ್ಟ ಸೂಟಿತ್ತು. ನಂಗೆ ಧಾರೇಲಿ ಕೊಟ್ಟಿದ್ದ ಒಂದು ಕಲಾಪತ್ತು ಸೀರೆ. ಒಂದು ಸಲ ಸ್ನೇಹಿತರ ಜತೆ ಪಿಕ್ನಿಕ್‌ಗೆ ಹೋಗಿದ್ದೀ. ಚೆನ್ನಾಗಿ ಅಡಿಗೆ ಮಾಡ್ಕೊಂಡಿದ್ದೆ. ಆದರೆ ಮನೇಲಿ ಸ್ಟೀಲ್ ಪಾತ್ರೆಗಳೇ ಇರಲಿಲ್ಲ ಅಂದಲ್ಲ, ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಅವನ್ನು ಹಾಕ್ಕೊಂಡು ಹೋಗಿದ್ದೆ. ಎಲ್ಲೂ ತಿನ್ನೋಕೆ ಕೂತರು. ಆದರೆ ನನ್ನ ಊಟ ತಿಂಡಿಯೆಲ್ಲಾ ಪ್ಲಾಸ್ಟಿಕ್ ವಾಸನೆ!

**ಮರಳಿ ಮೈಸೂರಿಗೆ:** ''ಗುಜರಾತ್‌ನಲ್ಲಿ ಸಂಸಾರ ನಿಭಾಯಿಸುತ್ತಿದ್ದ ಹಾಗೇ ಒಂದು ದಿನ ವೈಸ್ ಚಾನ್ಸಲರ್ ಇವರನ್ನು ಕರೆಸಿ ಹೇಳಿದರು:'' ನೋಡಿ, ಫಿಲಾಸಫಿಗೆ ವಿದ್ಯಾರ್ಥಿಗಳೇ ಬರ್ತಾ ಇಲ್ಲ ಈ ವರ್ಷ ಓದ್ತಾ ಇರೋ ವಿದ್ಯಾರ್ಥಿಗಳು ಹೊರಬಿದ್ದ ''ಧರ್ಮಶ್ರೀ'' ''ದೂರ ಸರಿದರು'' ಕಾದಂಬರಿಗಳು ಪ್ರಕಟವಾಗಿ ಹೆಸರು ಮಾಡಿದು. ಆದರೆ ಹೊಟ್ಟೆಪಾಡು! ನಂಗೆ ಅಪ್ಪ ಹಳ್ಳಿಲಿ ಸ್ವಲ್ಪ ಜಮೀನು ಕೊಟ್ಟಿದರು. ಇವರೆಂದರು: ''ನೋಡು ಇನ್ಮೇಲೆ ಸಾಹಿತ್ಯದಿಂದಲೇ ಜೀವನ ಕಳೀಬೇಕು. ನಿನ್ನೂರಲ್ಲಿ ಒಂದು ಪುಟ್ಟ ಮನೆ ಕಟ್ಟಿಸೋಣ. ನೀನು ಬಟ್ಟೆ ಹೊಲಿಯೋದನ್ನು ಕಲಿತು ಸ್ವಲ್ಪ ಸಂಪಾದಿಸು. ಮನೇಲಿ ಸಿಹಿತಿಂಡಿ ಮಾಡಿ ಮಾರಾಟ ಮಾಡು. ನಾನು ರಾಣೆ ಬೆನ್ನೂರಿನಲ್ಲಿರೋ ಗೋವಿಂದರಾಯರ ಹತ್ತಿರ ಹೋಗಿ ಅವರ ಸಹಾಯದಿಂದ ಒಂದು ಪುಟ್ಟ ಹೋಟೇಲನ್ನು ಶುರು ಮಾಡ್ತೀನಿ, ಕೆಳಗಿನ ಶಾಲೆಗಳಲ್ಲಿ ಕೆಲಸ ಸಿಗಬಹುದು. ಆದರೆ ಅವೆಲ್ಲ ನಂಗೆ ಇಷ್ಟ ಇಲ್ಲ...'' ನಿರ್ವಾಹವೇ ಇರಲಿಲ್ಲ.

''ಆದರೆ ಅದೇನು ಭಗವಂತನ ಕೃಪೇನೋ, ದೆಹಲೀಲಿ ಚಂದ್ರಶೇಖರಯ್ಯ ಅಂತಿದ್ರು. ಅವರ ಹೆಂಡತಿ ತುಂಬಾ ಸಾಹಿತ್ಯ ಓದಿರೋರು. ಇವರಿಗೆ ಎನ್.ಸಿ.ಇ.ಆರ್.ಟಿ.ನಲ್ಲಿ ಸೀನಿಯರ್ ರಿಸರ್ಚ್ ಆಫೀಸರ್ ಹುದ್ದೆಗೆ ಸಂದರ್ಶನಕ್ಕೆ ಕರೆ ಬಂತು. 1968-69 ಅಲ್ಲಿದ್ದೆವು. ಆಮೇಲೆ ಮೈಸೂರಿನ ರೀಜನಲ್ ಕಾಲೇಜಿನ ಫಿಲಾಸಫಿ ವಿಭಾಗಕ್ಕೆ ಬಂದರು. ಒಂಟಿಕೊಪ್ಪಲು, ಝೂನ್ಸಿ ಲಕ್ಷ್ಮೀಬಾಯಿ ರಸ್ತೆ, ಹೀಗೆ ಎಲ್ಲೆಲ್ಲೋ ಬಾಡಿಗೆ ಮನೆಗಳಲ್ಲಿ ಅಲೆದಾಡಿದೆವು. ಮನೆ ಮಾಲೀಕರು ಒಂದು ವರ್ಷಾನೂ ಒಂದು ಕಡೆ ಇರಗೊಡಿಸ್ತಾ ಇರಲಿಲ್ಲ. ಮೈಸೂರಿಗೆ ಬಂದ ಮೇಲೆ ಸರೀಕರ ಮನೆಗೆ ಮದುವೆ ಮುಂಜಿಗೇಂತ ಹೋಗಲೇಬೇಕಾಯಿತು. ಇವರು ಎಲ್ಲಿಗೂ ಬರುತ್ತಿರಲಿಲ್ಲ. ನನ್ನ ಹತ್ತಿರ ಬಟ್ಟೆ ಒಡವೆ ಇಲ್ಲದೆ ಯಾವುದೇ ಸಮಾರಂಭಕ್ಕೆ ಹೋಗೋಕ್ಕೆ ಹಿಂಜರೀತಾ ಇದ್ದೆ. ದಾರದಲ್ಲಿ ಪೋಣಿಸಿದ ಕರಿಮಣಿ, ಗಾಜಿನ ಬಳೆ ಇಷ್ಟೇ ನನ್ನ ಆಭರಣ. ಒಂದು ಸಲ ಇವರಿಗೆ ಯಾವುದೋ ಪುಸ್ತಕದ ದುಡ್ಡ ಬಂತು ಧೈರ್ಯ ಮಾಡಿ ಕೇಳಿದೆ: ''ನಂಗೆ ಒಂದೆರಡು ಒಡವೆ, ಸೀರೆ ಬೇಕು'' ಅಂತ. ಪಾಪ, ನನ್ನ ಮನಸ್ಸು ಅರ್ಥವಾಯಿತೇನೋ, ತೆಗೆಸಿಕೊಟ್ಟರು. ಆಗ ನನಗೆ ''ನಾನೂ ನಾಲ್ಕು ಜನರಂತೆ'' ಅನ್ನೋ ಭಾವನೆ ಬಂತು. ಒಂದೊಂದೇ ಡಬ್ಬ, ತಟ್ಟೆ, ಪಾತ್ರೆ, ಚಮಚ ಶೇಖರಿಸಿದೆ. ಒಟ್ಟಿನಲ್ಲಿ ಆ ಕಾಲದ ಮಧ್ಯಮ ವರ್ಗದ ಮೈಸೂರು ಬ್ರಾಹ್ಮಣರ ಮನೆಯಲ್ಲಿ ಪ್ರದರ್ಶನವಾಗುತ್ತಿದ್ದವನ್ನು ನಾನೂ ನನ್ನ ಮನೇಲಿ ಪ್ರದರ್ಶಿಸೋದು ಸಾಧ್ಯವಾಯಿತು!''

''ಯಾವುದೇ ವಾತಾವರಣ ಇದ್ರೂ, ಇವರ ಬರವಣಿಗೆ ನಿರಂತರವಾಗಿ ಸಾಗ್ತಿತ್ತು. ನಾನು ಕನ್ನಡ ಟೈಪ್ ರೈಟಿಂಗ್ ಕಲಿತು ಹಸ್ತಪ್ರತೀನ ಟೈಪ್ ಮಾಡಿದರೆ ತಮಗೆ ನೆರವಾಗುತೆ ಅಂತ ಸಲಹೆ ಮಾಡಿದರು. ಕಲಿತೆ. ''ದಾಟು'', ''ಪರ್ವ'', ಕಾದಂಬರಿ ಹಸ್ತಪ್ರತಿಗಳನ್ನು ಇಡಿಯಾಗಿ ಟೈಪ್ ಮಾಡಿದೆ. ತೀವ್ರ ಬೆನ್ನುನೋವು ಕಾಣಿಸಿಕೊಂಡಿತು. ಇವರ ಬಟ್ಟೆಗಳನ್ನು ನಾನೇ ಒಗೆದು ಇಸ್ತ್ರಿ ಮಾಡಬೇಕಾಗಿತ್ತು ಈ ಕೆಲಸಗಳ ಮಧ್ಯೆಯೂ ಹೊಟ್ಟೆ ಆಪರೇಶನ್ ಆಯಿತು, ಆ ಕೆಲಸವೂ ನಿಂತಿತು.

''ಬಡತನ ಬರವಣಿಗೆ ಇವುಗಳ ಮಧ್ಯೆ ಸಂಸಾರ ತೂಗಿಸ್ಕೊಂಡು ಹೋಗಿದ್ದಾಗ ಮಕ್ಕಳನ್ನು ನನ್ನ ತೌರಿನಲ್ಲಿ ಬಿಡುವುದು ಅನಿವಾರ್ಯವಾಗಿತ್ತು, ಮೈಸೂರಿಗೆ ಬಂದ ಮೇಲೆ ಅವರನ್ನು ಕರೆತಂದೆವು. ನಾನು ಅನುಭವದಿಂದ ಹೇಳ್ತಿದೀನಿ ಕೇಳೀ.... ಮಕ್ಕಳನ್ನು ಬುದ್ಧಿ ಬಂದೇಲೆ ಹೊರಗೆ ಕಳಿಸಬೇಕೇ ಹೊರತು ಸಣ್ಣ ವಯಸ್ಸಿ ನಲ್ಲೇ ಎಂದೂ ಬೇರೆ ಮನೆಗೆ ಕಳಿಸಬಾರದು ಕಣೋ.... ಮಕ್ಕಳು ಮನೆಗೆ ಬಂದ್ರಲ್ಲ.... ಎಂಥಾ ಧೋರಣೆ ಅಂತೀರೀ... ನಾನು ಏನು ಮಾಡಿದರೂ ಇದು ಅಜ್ಜಿ ಮಾಡಿದ ಹಾಗಿಲ್ಲ ಅಂತ ಆಕ್ಷೇಪಣೆ. ಅದು ಸರಿಯಿಲ್ಲ, ಇದು ಸರಿಯಿಲ್ಲ ಅಂತ ದಿನದಿನಕ್ಕೂ ದೂಷಣೆ. ಈಗ ನನ್ನ ದೊಡ್ಡ ಮಗ ರವಿಶಂಕರ್ ಎಂಜಿನಿಯರಾಗಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಎ.ನೂ ಮಾಡಿ ಲಂಡನ್ ನಲ್ಲಿದ್ದಾನೆ. ನ್ಯೂಯಾರ್ಕ್‌ನಲ್ಲಿ ಕೆಲಸ ಮಾಡಿದ, ರೋಟರಿ ವ್ಯಾಸಂಗ ವೇತನವೂ ಅವನಿಗೆ ಸಿಕ್ಕಿತು. ಎರಡನೆಯವನೂ ಬಿ.ಇ. ಮಾಡಿ ಹೈದರಾಬಾದ್‌ನಲ್ಲಿ ವೀಡಿಯಾ ಇಂಡಿಯಾದಲ್ಲಿ ತುಂಬಾ ದೊಡ್ಡ ಹುದ್ದೆಯಲ್ಲಿದ್ದಾನೆ. ಆದರೆ ಅಂತರ್ಮುಖಿಯಾದ. ಬರವಣಿಗೆಯನ್ನೇ ಧ್ಯೆಯವನ್ನಾಗಿ ಹೊಂದಿದ ಪತಿಯನ್ನು ಪಡೆದ ನಾನು ಅವರ ಮಕ್ಕಳ ತಾಯಿಯಾಗಿ ಮೊದಮೊದಲು ತುಂಬಾ ಕಷ್ಟ ಪಟ್ಟಿದ್ದೀನಿ. ನನ್ನ ಮಕ್ಕಳು ಹೇಳಲಾರದಷ್ಟು ತುಂಟರಾಗಿದ್ದರು. ಕೈ ಮುರಿದುಕೊಳ್ಳೋದು, ಕಾಲು ಮುರಿದುಕೊಳ್ಳೋದು ಇವಂತೂ ಇದ್ದೇ ಇತ್ತು ಇವರು ಊರೂರು ತಿರುಗುತ್ತಾ ಇರೋರು. ಅಪ್ಪನ ಅಂಕೆ ಇಲ್ಲ. ಮಕ್ಕಳಿಗೆ ಸಿನಿಮಾ ಗೀಳು ಹತ್ತಿತ್ತು ಅಪ್ಪ ದುಡ್ಡಿನ ವಿಷಯದಲ್ಲಿ ಜಿಪುಣ, ತುಂಬಾ ಬಿಗಿ ಅಂತ ಮಕ್ಕಳು ಅಂದ್ಕೊತಿದ್ದವು. ಸುಳ್ಳು, ತಟವಟ, ಕದಿಯೋದು ಎಲ್ಲ ಶುರುವಾಯಿತು. ದುಡ್ಡು ಕಾಸು ಪರವಾಗಿಲ್ಲ. ಸ್ವಲ್ಪ ಸುಧಾರಿಸಿತು ಅಂದುಕೊಳ್ಳುವಷ್ಟರಲ್ಲಿ ಮಕ್ಕಳೇ ದೊಡ್ಡ ತಲೆನೋವಾದರು. ಒಂದು ಕಾಲಕ್ಕಂತೂ ಮೈಸೂರಿನಲ್ಲಿ ''ಭೈರಪ್ಪನವರ ಮಕ್ಕಳು ಅಂದ್ರೆ ಪೋಲಿಗಳು'' ಅಂತ ಜನ ಮಾತಾಡಿಕೊಳ್ಳುವ ಮಟ್ಟಕ್ಕೂ ಅವರ ನಡತೆ ಮುಂದುವರಿಯಿತು. ನಾನು ಇವರಿಗೆ ಮಕ್ಕಳ ಮೇಲೆ ಚಾಡಿ ಹೇಳಿದ್ದೆ. ಆದರೆ ಅದರ ಪರಿಣಾಮ ಮಕ್ಕಳಿಗೆ ಇವರಿಂದ ಏಟು, ಬುದ್ಧಿವಾದ. ಆದರೆ ಅಪ್ಪ ಮರೆಯಾದ ಕೂಡಲೇ ಮಕ್ಕಳು ನನ್ನನ್ನೇ ದಬಾಯಿಸುತ್ತಿದ್ದರು, ಚಾಡಿ ಹೇಳಿ ಹೊಡೆಸಿದೆ ಅಂತ. ಆರಡಿ ಎತ್ತರಕ್ಕೆ ನನಗಿಂತಲೂ ತುಂಬಾ ಎತ್ತರಕ್ಕೆ ಬೆಳೆದಿದ್ದ ಮಕ್ಕಳು, ನಂಗೆ ಅವರ ಹತ್ತಿರ ಜಗಳವಾಡೋಕ್ಕೆ ತಾಕತ್ತಿತ್ತೇ? ಸುಮ್ಮನೆ ಕೂತು ಅತ್ತು ಬಿಡುತ್ತಿದ್ದೆ. ನಮಗೆ ಅವರನ್ನು ಶಿಸ್ತಿನಲ್ಲಿ ಬೆಳೆಸೋಕ್ಕೆ ಆಗದಿದ್ದಾಗ ಮೈಸೂರಿನ ರಾಮಕೃಷ್ಣಾಶ್ರಮಕ್ಕೆ ಅವರನ್ನು ಕಳಿಸೋಕೆ ಪ್ರಯತ್ನ ಮಾಡಿದೆವು. ಮಂಗಳೂರಿನ ಹತ್ತಿರ ಇರುವ ಅಳಕೆಗೆ ಮಕ್ಕಳನ್ನು ಕಳಿಸಿ ಅಲ್ಲಿನ ಸತ್ಯಸಾಯಿ ವಿಹಾರದಲ್ಲಿ ಓದಿಸಿದೆವು. ಇವರು ಮಕ್ಕಳಿಗೆ ಹೇಳಿದರು: ''ನಾನು ನಿಮಗೆ ಕೊಡಿಸೋದು ಒಂದೇ ಡಿಗ್ರಿ. ಮುಂದೆ ಓದೋದು ನಿಮ್ಮದೇ ಹೊಣೆ'' ಅಂತ. ಅದ್ಯಾವ ಜನ್ಮದ ಪುಣ್ಯವೋ! ಮಕ್ಕಳು ಕೈಬಿಟ್ಟೇ ಹೋದರು ಅಂತ ನಾನು ತಿಳಿದಿದ್ದಾಗ ಮತ್ತೆ ಅವರು ದಾರಿಗೆ ಬಂದರು. ಈಗ ಮದುವೆಯಾಗಿ ತಮ್ಮ ಪಾಡಿಗೆ ತಾವಿದ್ದಾರೆ. ನಮ್ಮ ರವಿ ಶಂಕರನ ಹೆಂಡತಿ ಅರ್ಚನಾ, ಬಿ.ಇ. ಪದವೀಧರೆ. ಎರಡನೆಯ ಸೊಸೆ ಅನುರಾಧಾ ನಿಟ್ಟೂರು ಶ್ರೀನಿವಾಸರಾಯರ ಮೊಮ್ಮಗಳು. ಮೊದಲನೆಯವರಿಗೆ ಒಂದು ಹೆಣ್ಣುಮಗು ಚಂದನಾ. ಎರಡನೆಯವನ ಮಗ ವಿಕ್ರಮ್. ಈಗ ಮಕ್ಕಳಿಗೆ ಅಪ್ಪನ ಮೇಲೆ ತುಂಬಾ ಗೌರವ. ಅವರಿಗೆ ಕಾದಂಬರಿಗಳು ಓದುವ ಅಭ್ಯಾಸ ಏನಿಲ್ಲ. ಆದರೆ ಸೊಸೆಯರು ಓದುತ್ತಾರೆ. ಈಗ ಮಕ್ಕಳು ಅಂತಾರೆ, ''ನಮ್ಮ ಮಕ್ಕಳನ್ನು ನಿಮ್ಮ ಹತ್ರ ಬಿಡ್ತೀವಮ್ಮಾ, ಮೈಸೂರಲ್ಲೇ ಓದಿಸು'' ಅಂತ. ನಾನದಕ್ಕೆ ''ಬೇಡಪ್ಪಾ, ಬೇಡ..... ಅವು ದೊಡ್ಡವಾದ ಮೇಲೆ ಬಿಡಿ ಬೇಕಾದರೆ. ಈಗಂತೂ ನಂಗೆ ಆ ಜಂಜಾಟವೇ ಬೇಡ'' ಅಂತೀನಿ.

**ನಿರ್ಲಿಪ್ತ:** ಇವರು ಊರಲ್ಲಿದ್ದಾಗ ನಾವಿವರನ್ನು ನೋಡೋದು ಬೆಳಿಗ್ಗೆ 5.30 ಗಂಟೆಗೆ ಕಾಫಿ, ಟೀ ಕುಡಿಯೋದೇ ಇಲ್ಲದಿದ್ದರೂ ಕಾಣಿಸ್ತಾರೆ. ಮಧ್ಯಾಹ್ನ 1.30 ಗಂಟೆಗೆ ಊಟಕ್ಕೆಂತ ಮಹಡಿಯಿಂದ ಇಳಿದು ಬರ್ತಾರೆ. ಒಂದು ಚಪಾತಿ, ಒಂದು ಬೇಯಿಸಿದ ಪಲ್ಯ, ಒಂದು ಹಸಿ ಪಲ್ಯ, ಹಣ್ಣು ತಿಂತಾರೆ ಸ್ವಲ್ಪ ಹಾಲು ಕುಡೀತಾರ. ತಿರುಗಿ ರಾತ್ರಿ 7 ಗಂಟೆಗೇ ಮತ್ತೆ ಇವರ ಮುಖದರ್ಶನ. ರಾಗಿ ಮುದ್ದೆ ತಿನ್ನುತ್ತಿರುವಾಗ, ಆಗ ಎಷ್ಟು ಮಾತಾಡ್ತೀವೋ ಅಷ್ಟೆ. ಯಾವುದಾದರೂ ಬರವಣಿಗೆ ಶುರು ಮಾಡಿದ್ದರಂತೂ ''ಹಾಂ... ಹೂಂ....'' ಇಷ್ಟೇ ಕೇಳಿದ್ದಕ್ಕೆಲ್ಲ. ಈಗ ಇವರಿಗೂ 60 ವರ್ಷವಾಯಿತು. ಬೆನ್ನುನೋವಿಂದ ಒದ್ದಾಡ್ತಿದಾರೆ ಅಂತಲೂ ಗೊತ್ತು ದೆಹಲಿ ಬಿಡುವಾಗಲೇ ಪೈಲ್ ಕಂಪ್ಲೇಂಟ್ ಶುರುವಾಗಿತ್ತು. ಆದ್ದರಿಂದ ಆಹಾರ ಸೇವನೆಯಲ್ಲಿ ತುಂಬಾ ನಿಯಂತ್ರಣ ಇಟ್ಕೋತಾರೆ. ಬರೆಯುವಾಗ 2-3 ಬಟ್ಟಲು ಹಾಲನ್ನು ಹೆಚ್ಚಾಗಿ ಕುಡೀತಾರೆ. ಬೇರೆ ಯಾವ ದುರಭ್ಯಾಸವೂ ಇಲ್ಲ, ಕುಡಿಯೊಲ್ಲ ಸಿಗರೇಟು ಸೇದೊಲ್ಲ. ನಡುರಾತ್ರಿಯಾದರೂ ಇವರು ಬರೀತಾ ಕೂತಿದಾರೆ ಅಂತ ಗೊತ್ತಾದರೂ ನಾನೇನೂ ಮಾಡಲಾರೆ. ''ಪರ್ವ'' ಬರೆಯುವಾಗಲಂತೂ ಗೊತ್ತಿಲ್ಲ ಇವರ ಆರೋಗ್ಯದ ಸ್ಥಿತಿ ಏನಾಗಿತ್ತು ಅಂತ. ಆಗ ಮಾತ್ರ ನಾವಿಬ್ಬರೇ ಟೂರ್ ಹೋಗಿದ್ದೆವು. ಕಾದಂಬರಿ ರೂಪಗೊಳ್ಳಲು 4 ವರ್ಷಗಳು ಹಿಡಿದವು. ತೀರಾ ಸುಸ್ತಾಗಿಬಿಟ್ಟಿದ್ದರು. ಮಾನಸಿಕವಾಗಿ ಕೂಡಾ... ಹುಬ್ಬಳ್ಳಿಯಲ್ಲಿ ಡಾಕ್ಟರ ಹತ್ತಿರ ಹೋದಾಗ ಅವರೆಂದರು. ''ನಿಮ್ಮ ತಲೇಲಿ ಇರುವುದನ್ನು ಬರೆದು ಬಿಡಿ ಆಗಲೇ ನೀವು ಸುಧಾರಿಸಿಕೊಳ್ಳೋದು ಅಂತ. ಮೈಸೂರಿಗೆ ಬಂದು ಕೂತು ಸತತವಾಗಿ ಅದನ್ನು ಬರೆದು ಪೂರೈಸಿದಾಗಲೇ ಇವರಿಗೆ ನೆಮ್ಮದಿಯಾದದ್ದು.''

''ಇವರು ಬರೆಯಲಿರೋ ಕಾದಂಬರಿನ ನನ್ನ ಹತ್ತಿರವೇನೂ ಎಂದು ಚರ್ಚಿಸಿಲ್ಲ. ಯಾವ ಸಾಹಿತಿಗಳ ಜತೇನೂ ಹೆಚ್ಚಾಗಿ ಸೇರೊಲ್ಲ ಏಕೆಂದರೆ ಸಾಹಿತಿಗಳ ಜತೆ ಸೇರಿದರೆ ಬರೀ ಸಾಹಿತ್ಯಾನೇ ಚರ್ಚಿಸುತ್ತಾ ಇರಬೇಕಾಗುತ್ತೆ ಬೇರೆ ಚರ್ಚೆಗೆ ಆಸ್ಪದವಿರೊಲ್ಲ'' ಅಂತ. ಆದರೆ ಕೆಲವು ಹೊರಗಿನ ಜನರನ್ನು ಒಮ್ಮೊಮ್ಮೆ ಪದೇ ಪದೇ ಭೇಟಿಯಾಗ್ತಾರೆ. ಅವರ ಜತೆ ಮಾತ್ರ ಹೆಚ್ಚಿಗೆ ಮಾತಾಡ್ತಾರೆ. ಅವರ ಪೂರ್ವಿಕರು, ವಾತಾವರಣ. ಇತಿಹಾಸ ಇವುಗಳ ಬಗ್ಗೆ ಒಮ್ಮೊಮ್ಮೆ ನನ್ನನ್ನೆ ಎಕ್ಸ್‌ಪೆರಿಮೆಂಟ್ ಆಗಿ ಇಡ್ಕೊತಾರೇನೋ ಅಂತ ಅನ್ನಿಸಿಬಿಡುತ್ತೆ ಹೀಗೆಲ್ಲ ಬೇರೆಯವರ ಜತೆ ಇವರು ಮಾತನಾಡುತ್ತಿದ್ದಾಗ ಹಿಂದೆಲ್ಲ ನಾನೂ ಮಧ್ಯೆ ಬಾಯಿ ಹಾಕಿ ಬೈಸಿಕೊಂಡಿದ್ದೆ. ಇವರು ಯಾವುದೋ ಪುಸ್ತಕದ ಮಾಹಿತಿಗಾಗಿ ಅವರ ಜತೆ ಮಾತಾಡ್ತಿದಾರೆ ಅಂತ ನಂಗೆ ಗೊತ್ತಾಗ್ತಾ ಇರಲಿಲ್ಲ. ಈಗ ಅರ್ಥವಾಗಿದೆ. ಅನೇಕ ಸಲ ಇವರು ಟೂರ್ ಹೋದಾಗ ಎಲ್ಲಿದ್ದಾರೆ. ಯಾವಾಗ ಬರ್ತಾರೆ ಅಂತಲೂ ಗೊತ್ತಿರೊಲ್ಲ ''ಬದುಕಿದ್ದರೆ ಮನೆಗೆ ಬರ್ತೀನಿ. ನಾನು ಸತ್ತರೆ ಹೇಗೋ ವಿಷಯ ಗೊತ್ತಾಗುತ್ತೆ'' ಅಂತ ಉತ್ತರ ಕೊಟ್ಟರೆ ನಾನೇನ್ಮಾಡಲಿ ಹೇಳಿ? ಒಟ್ಟಿನಲ್ಲಿ ಅವರು ಕೆಟ್ಟ ಕೆಲಸ ಮಾಡ್ತಿಲ್ಲ ಅನ್ನೋ ನಂಬಿಕೆ ನನಗಿದೆ. ಪುಸ್ತಕ ಬರೆದ ಮೇಲೆ ಹಸ್ತಪ್ರತಿ ತೋರಿಸ್ತಾರೆ. ಅಭಿಪ್ರಾಯ ಕೇಳ್ತಾರೆ. ಕೆಲವೊಮ್ಮೆ ತಿದ್ದಿಕೊಂಡಿರುವುದೂ ಉಂಟು. ಆದರೆ ಎಂ.ಎಸ್.ಕೆ. ಪ್ರಭು, ಪ್ರೊ.ಬಾಲಸುಬ್ರಹ್ಮಣ್ಯಂ ಇವರಿಬ್ಬರ ಮುಂದಂತೂ ಯಾವುದೇ ಕೃತಿಯನ್ನು ಪ್ರಕಟನೆಗೆ ಮೊದಲೇ ವಾಚನ ಮಾಡಲೇ ಬೇಕು. ಈಗ ಶಂಕರಾಚಾರ್ಯರ ಬಗ್ಗೆ ಬರಿತೀನಿ ಅಂತ ಯಾವಾಗಲೋ ಹೇಳಿದ್ದರು. ತಮ್ಮ ಆತ್ಮಕಥನವನ್ನು ಪ್ರಾರಂಭಿಸಬೇಕು. ತಮ್ಮ ತಾಯಿ ಸತ್ತಮೇಲೆ ಬಂದ ಕಷ್ಟ ಗಳು, ಊರಿಗೆ ಪ್ಲೇಗ್ ಬಂದಿದ್ದಾಗ, ಬರ ಬಂದಿದ್ದಾಗ ನಡೆದ ಘಟನೆಗಳು. ಇವರಜ್ಜಿ 7-8 ರೊಟ್ಟಿಗಳನ್ನು ಒಟ್ಟಿಗೆ ಮಾಡಿ ಬಡುವಿನ ಮೇಲಿಟ್ಟಾಗ ಒಣಗಿದ್ದನ್ನು ಎಷ್ಟೋ ದಿನಗಳ ಕಾಲ ಸ್ವಲ್ಪಸ್ವಲ್ಪವೇ ತಿನ್ನಬೇಕಾದಾಗ ಅವನ್ನು ಚೌಕದಲ್ಲಿ ಕಟ್ಟಿ ನೀರಲ್ಲಿ ನೆನೆಸಿಟ್ಟು ಮೆತ್ತಗಾದ ಮೇಲೆ ಅವನ್ನು ತಿಂತಾ ಇದ್ದದ್ದು, ಮಹಾರಾಜಾ ಕಾಲೇಜಿನ ಕಲ್ಲು ಬೆಂಚಿನ ಮೇಲೆ ಮಲಗಿ ರಾತ್ರಿಗಳನ್ನು ಕಳೆದದ್ದು, ಬಿ.ಎ. ಆನರ್‌ನಲ್ಲಿದ್ದಾಗ ದಿನವೂ 8 ಆಣೆ ಕೊಟ್ಟು 7- 8 ಇಡ್ಲಿಗಳನ್ನು ತಿಂದು ದಿನಗಳನ್ನು ಕಳೆದದ್ದು ಇವೆಲ್ಲವೂ ಅದರಲ್ಲಿ ಬರಬಹುದು. ಈಗ ''ಸಾಕ್ಷಿ'' ಅಥವಾ ''ವಂಶವೃಕ್ಷ'' ಇವೆರಡರಲ್ಲಿ ಒಂದು ಇಂಗ್ಲೀಷ್ ತರ್ಜುಮೆಯಾಗ್ತಿದೆ. ಅದರ ಸಂಬಂಧವಾಗಿಯೇ ಈಗ ಲಂಡನ್‌ನಲ್ಲಿದ್ದಾರೆ.

ಕಾದಂಬರಿ ಬರೆಯೋಕೆ ಮುಂಚೆ ಇವರ ಮಾನಸಿಕ ಸ್ಥಿತಿ ತುಂಬಾ ಗಂಭೀರವಾಗಿದ್ದರೂ ಅದು ಹೊರಬಂದ ಮೇಲೆ ಕೀರ್ತಿ ಅಪಕೀರ್ತಿಗಳ ಬಗ್ಗೆ ಎಂದೂ ಯೋಚನೆ ಮಾಡಿದವರಲ್ಲ. ಯಾರ ಜತೆ ಮನಸ್ತಾಪಾನೂ ಇಲ್ಲ ಅತಿಯಾದ ಸ್ನೇಹವೂ ಇಲ್ಲ ''ಸ್ವತಂತ್ರ ವ್ಯಕ್ತಿ'' ಭೈರಪ್ಪನವರು ಭಾರೀ ಜಿಪುಣದ ಅವರ ಮನೆಗೆ ಹೋದರೆ ಏನೂ ಸಿಗೊಲ್ಲ ಅನ್ನೋರಿದ್ದಾರೆ. ಆದರೆ ಕೈಲಾಗದವರಿಗೆ, ಕಷ್ಟದಲ್ಲಿದ್ದವರಿಗೆ, ವಿದ್ಯಾರ್ಥಿಗಳಿಗೆ ಕೊಡುಗೈನಿಂದ ದಾನ ಮಾಡ್ತಾರೆ: ಬಿಡುಗೈನಿಂದ ಸಹಾಯ ಮಾಡ್ತಾರೆ. ಅನ್ನೋದು ನಂಗೆ ಗೊತ್ತಿದೆ. ತಮ್ಮ ಕೃತಿಯ ಬಗೆಗಾಗಲಿ, ವೈಯಕ್ತಿಕ ನಿಂದೆಯ ಬಗ್ಗೆಯಾಗಲಿ ತಲೆ ಕೆಡಿಸಿಕೊಂಡವರಲ್ಲ. ಯಾರ್ಯಾರೋ ಏನೇನೋ ಹೆಸರಿಡ್ತಾರೆ. ರಾಜಕೀಯ ಪಕ್ಷಗಳ ಜತೆ ಇವರ ಹೆಸರನ್ನು ಸೇರಿಸ್ತಾರೆ. ಆದರೆ ಇವರದ್ದು ಸಾಮಾನ್ಯವಾಗಿ ಶಾಂತ ಸ್ವಭಾವವೇ, ನಿರ್ಲಿಪ್ತವಾಗಿ ತಮಗೆ ಸರಿ ಕಂಡಂಥ ನಿಲುವೇ !.

(ಸಾಹಿತಿ ಎಸ್.ಎಲ್. ಭೈರಪ್ಪ ಅವರ ಪತ್ನಿ ಸರಸ್ವತಿ ಅವರು ಕಳೆದ ಕೆಲವು ವರ್ಷಗಳ ಹಿಂದೆ ಮಾಧ್ಯಮವೊಂದಕ್ಕೆ

## ಯಾಕೆ?

ಅಮ್ಮ ನಮ್ಮೂರು ಏನಾದರೂ ಬದಲಾಗಿದ್ದೀಯಾ? ಯಾಕೆ ಮೊದಲಿನ ತರಹ ನಮ್ಮೂರಿಲ್ಲ. ಹಬ್ಬ ಬಂತು ಅಂದ್ರೆ, ನಮ್ಮ ಮನೆ ಮನೆಗೆ ಹುಲಿ, ಸಿಂಹ ಕರಡಿ ವೇಷಗಳು ಬಂದು ಹೋಗ್ತಾ ಇದ್ದವು. ನಮ್ಮನ್ನ ಮಾತನಾಡಿಸುತ್ತಿದ್ದರು. ನಮ್ಮ ಮನೆ ಅಂಗಳದಲ್ಲಿ ಕುಣಿತ ಇದ್ದು ನಾವು ಅದಕ್ಕೆ ದುಡ್ಡು ಕೊಡ್ತಾ ಇದ್ವಿ ನಾವು ಅದರ ಜೊತೆಗೆ ಕುಣಿಯುತ್ತಾ ಇನ್ನೊಂದಷ್ಟು ಮನೆಗಳಿಗೆ ಆ ಹುಲಿ ಸಿಂಹಗಳ ಹಿಂದೇನೆ ಹೋಗ್ತಾ ಇದ್ವಿ. ಆದರೆ ಈಗ ಅದು ನಮ್ಮ ಮನೆಗಳಿಗೆ ಬರುವುದನ್ನು ನಿಲ್ಲಿಸಿ ಬಿಟ್ಟಿದೆ ಯಾಕೆ? ಪೇಟೆಗಳಲ್ಲಿ ದೊಡ್ಡವರ ಮನೆಗಳಲ್ಲಿ ಮಾತ್ರ ಹುಲಿ ಸಿಂಹಗಳು ಕುಣಿಯುತ್ತಿದ್ದಾವೆ ಯಾಕೆ? ನಾವು ಕೊಡುವ ಐವತ್ತು ನೂರು ಸಾಕಾಗೋದಿಲ್ಲವಾ? ನಮ್ಮನ್ನ ಹುಲಿ ಸಿಂಹಗಳು ಯಾಕೆ ಮರಿಬೇಕು? ನಾವು ಅವುಗಳನ್ನು ಕಾಯ್ತಾ ಇದ್ದೇವೆ ತಾನೇ, ಇಷ್ಟು ದಿನದವರೆಗೆ ನಮ್ಮ ಒಡನಾಡಿಯಾಗಿದ್ದ ಹುಲಿ ಸಿಂಹದ ವೇಷಗಳು ಈಗ ದೊಡ್ಡವರ ಮನೆಯ ಅಂಗಳದಲ್ಲಿ ಮಾತ್ರ ನಿಲ್ಲುವುದಕ್ಕೆ ಆರಂಭ ಮಾಡಿದೆ. ನನಗೆ ಮೊದಲಿದ್ದ ಊರಬೇಕು ಎಲ್ಲರ ಹಾಗೆ ನಮ್ಮ ಮನೆ ಅಂಗಳಕ್ಕೆ ಎಲ್ಲರೂ ಬರುವಂತಾಗಬೇಕು. ಮಗುವಿನ ಪ್ರಶ್ನೆಗೆ ತಾಯಿಯ ಬಳಿ ಉತ್ತರವಿರಲಿಲ್ಲ.

**- ಧೀರಜ್** ಬೆಳ್ಳಾರೆ



## ಪಾರ್ಕ್ ಜಾಗದಲ್ಲಿ ಸಸಿ ನೆಟ್ಟ ನಿವಾಸಿಗಳು



• ಪ್ರಜೋದಯ ವರದಿ

**ಹಾಸನ:** ನಗರದ ಎಸ್‌ಬಿಎಂ ಕಾಲೋನಿಯಲ್ಲಿ (ಹೆಲ್ತ್ ಕಾಲೋನಿ) ಒತ್ತುವರಿಯಾಗಿದ್ದ ಪಾರ್ಕ್ ಜಾಗ ಉಳಿಸಿಕೊಳ್ಳುವಲ್ಲಿ ನಿವಾಸಿಗಳು ಯಶಸ್ವಿಯಾಗಿದ್ದು ಆರಂಭಿಕ ಹಂತವಾಗಿ ಜಾಗದಲ್ಲಿ ಸಸಿ ನೆಟ್ಟು ಉದ್ಯಾನವನ ನಿರ್ಮಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ.

ಶಿಕ್ಷಕರು, ಸರ್ಕಾರಿ ನೌಕರರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸವಿರುವ ಎಸ್‌ಬಿಎಂ ಕಾಲೋನಿ ಅಭಿವೃದ್ಧಿಯಿಂದ ತೀರಾ ಹಿಂದುಳಿದಿತ್ತು. ಪಾರ್ಕ್‌ಗಾಗಿ ಮೀಸಲಿಟ್ಟ ಜಾಗವನ್ನು ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿದ್ದರು. ಈ ವಿಚಾರ ಅರಿತ ಸ್ಥಳೀಯ ನಿವಾಸಿಗಳು ಶಾಸಕ ಹೆಚ್.ಪಿ. ಸ್ವರೂಪ್ ಹಾಗು ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿಗೆ ಮನವಿ ಸಲ್ಲಿಸಿದ್ದರು.

ಕಳೆದ ತಿಂಗಳು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜನ ಸ್ಪಂದನ ಸಭೆಯಲ್ಲಿ ಮನವಿ ಸಲ್ಲಿಸಿದ್ದ ಸ್ಥಳೀಯರು, ಒತ್ತುವರಿಯಾಗಿರುವ 3 ಗುಂಟೆ ಪಾರ್ಕ್ ಜಾಗವನ್ನು ತೆರವು ಮಾಡಿಕೊಟ್ಟರೆ ಸುತ್ತಲಿನ ನಿವಾಸಿಗಳೇ ಸಸಿ ನೆಟ್ಟು ಪಾರ್ಕ್ ಅಭಿವೃದ್ಧಿ ಮಾಡುತ್ತೇವೆ. ಸಾರ್ವಜನಿಕರ ಸ್ವತ್ತು ಖಾಸಗಿಯವರ ಪಾಲಾಗಲು ಬಿಡಬಾರದೆಂದು ಮನವಿ ಮಾಡಿದ್ದರು.

ಈ ಸಂಬಂಧ ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದ ಜಿಲ್ಲಾಧಿಕಾರಿ, ಸರ್ವೇ ನಡೆಸಿ ಒತ್ತುವರಿ ಜಾಗ ತೆರವುಗೊಳಿಸಿ ಸುತ್ತಲೂ ಬೇಲಿ ಹಾಕುವಂತೆ ಸೂಚಿಸಿದ್ದರು. ಅದರಂತೆ ಪಾಲಿಕೆ ಇಂಜಿನಿಯರ್‌ಗಳು ಭೇಟಿ ನೀಡಿ ಪಾರ್ಕ್ ಜಾಗಕ್ಕೆ ಬೇಲಿ ಹಾಕಿಸಿದ್ದರು. ಪಾಲಿಕೆ ಸಿಬ್ಬಂದಿ ಹಾಗು ಸ್ಥಳೀಯರು ಒಟ್ಟಾಗಿ ಪಾರ್ಕ್ ಅನ್ನು ಸ್ವಚ್ಛಗೊಳಿಸಿ ಸಸಿ ನೆಟ್ಟಿದ್ದಾರೆ.

## ಕೃಷಿ ಭೂಮಿಗೆ ನೀರು, ವಿದ್ಯುತ್; ಆರ್ಥಿಕ ಸ್ಥಿತಿಗೆ ಬಲ

### ಬಾಣಾವರದ ಜೋಯಿಸರ ಕೊಪ್ಪಲು ಗ್ರಾಮದಲ್ಲಿ ಸೌರ ವಿದ್ಯುತ್ ಘಟಕ ಆರಂಭಕ್ಕೆ ಭೂಮಿಪೂಜೆ

• ಪ್ರಜೋದಯ ವರದಿ



**ಅರಸೀಕೆರೆ:** ರೈತರ ಕೃಷಿ ಭೂಮಿಗೆ ನೀರು, ವಿದ್ಯುತ್ ಪೂರೈಸಿದ್ದೇ ಆದರೆ ರೈತನ ಬದುಕಷ್ಟೇ ಅಲ್ಲ, ರಾಜ್ಯ ಹಾಗೂ ದೇಶದ ಆರ್ಥಿಕ ಸ್ಥಿತಿಗತಿಯೇ ಬದಲಾಗಲಿದೆ ಎಂದು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರೂ ಆದ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ತಿಳಿಸಿದರು.

ತಾಲ್ಲೂಕಿನ ಬಾಣಾವರದ ಜೋಯಿಸರ ಕೊಪ್ಪಲು ಗ್ರಾಮದಲ್ಲಿ ಸೌರ ವಿದ್ಯುತ್ ಘಟಕ ಆರಂಭಕ್ಕೆ ಶನಿವಾರ ಭೂಮಿಪೂಜೆ ನೆರವೇರಿಸಿ ನಂತರ ಮಾತನಾಡಿದ ಅವರು, ಕ್ಷೇತ್ರದ ಆಯ್ದ ಭಾಗಗಳಲ್ಲಿ ರೈತರಿಂದ ಒಡಂಬಡಿಕೆ ಮಾಡಿಕೊಂಡು ಪಡೆದಿರುವ ಭೂಮಿಯಲ್ಲಿ ಸೌರಶಕ್ತಿ ವಿದ್ಯುತ್ ಘಟಕ ಆರಂಭಿಸಲು 250 ಕೋಟಿ ರೂ. ಅನುದಾನ ತಂದಿದ್ದು, ಇದರಿಂದ 50 ಮೆಗಾವ್ಯಾಟ್ ವಿದ್ಯುತ್ ಹೆಚ್ಚುವರಿಯಾಗಿ ಕ್ಷೇತ್ರಕ್ಕೆ ಲಭ್ಯವಾಗಲಿದೆ ಎಂದು ಮಾಹಿತಿ ನೀಡಿದರು.

ದಿನದಿಂದ ದಿನಕ್ಕೆ ಜನಸಂಖ್ಯೆ ಬೆಳೆದಂತೆ ರೈತರ ಕೃಷಿ ಚಟುವಟಿಕೆಯಲ್ಲೂ ಭಾರೀ ಬದಲಾವಣೆಗಳಾಗುತ್ತಿವೆ. ರೈತರ ಅಪೇಕ್ಷೆಗೆ ಅನುಗುಣವಾಗಿ ನೀರು ಮತ್ತು ವಿದ್ಯುತ್‌ನ್ನು ಒದಗಿಸಿದ್ದೇ ಆದರೆ ಆರ್ಥಿಕವಾಗಿ ರೈತರು ಸದೃಢವಾಗಲಿದ್ದಾರೆ ಎಂದ ಅವರು, ಈ ಸೌರ ವಿದ್ಯುತ್ ಉತ್ಪಾದನೆಯಿಂದ 50 ಮೆಗಾವ್ಯಾಟ್ ವಿದ್ಯುತ್ ದೊರೆಯಲಿದ್ದು, ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆವರೆಗೂ ವಿದ್ಯುತ್ ಲಭ್ಯವಾಗಲಿದೆ. ಹೀಗೆ ದೊರೆಯುವ ವಿದ್ಯುತ್‌ನ್ನು ನೇರವಾಗಿ ರೈತರ ಟಿಸಿ,ಪಂಪ್‌ಸೆಟ್‌ಗಳಿಗೆ ರವಾನಿಸುವುದರಿಂದ ಹಗಲಿವ ವೇಳೆಯೂ ಕನಿಷ್ಠ 7 ಗಂಟೆ ರೈತರಿಗೆ ವಿದ್ಯುತ್ ಲಭ್ಯವಾಗಲಿದೆ. ಇದರಿಂದ ರೈತರ ಬದುಕಿನ ಚಿತ್ರಣವೇ ಬದಲಾಗಲಿದೆ ಎಂದರು.

ಅಂದುಕೊಂಡಂತೆ ಎಲ್ಲವೂ ನಡೆದರೆ ಕೇವಲ ಮೂರ್‍ನಾಲ್ಕು ತಿಂಗಳಲ್ಲೇ ಸೌರ ವಿದ್ಯುತ್ ರೈತರ ಕೃಷಿ ಭೂಮಿಗೆ ತಲುಪಲಿದೆ. ಇದನ್ನು ತಾಲ್ಲೂಕಿನ ರೈತರು ಸದುಪಯೋಗಪಡಿಸಿಕೊಳ್ಳುವ ಮೂಲಕ ತರಕಾರಿ, ಹೂವು, ಹಣ್ಣು- ಹಂಪಲುಗಳನ್ನು ಬೆಳೆದು ಆರ್ಥಿಕವಾಗಿ ಮುಂದೆ ಬರುವಂತೆ ಅವರು ಕರೆ ನೀಡಿದರು.

ಅರಸೀಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಶಾಸಕರ ಅವಿರತ ಶ್ರಮದಿಂದಾಗಿ ಇಂದು ಬಯಲು ಸೀಮೆಯ ರೈತರ ಬದುಕನ್ನು ಹಸನುಗೊಳಿಸುತ್ತಿದೆ. ಇದರ ಪ್ರಯೋಜನವನ್ನು ಕ್ಷೇತ್ರದ ಜನತೆ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಈ ವೇಳೆ ಇಇ ರಾಜು, ಎಇಇಗಳಾದ ಜಯಪ್ಪ, ಮಂಜುನಾಥ್, ರಘುನಂದನ್, ಕಾಚಿಘಟ್ಟ ಗ್ರಾಪಂ ಅಧ್ಯಕ್ಷೆ ಭಾಗ್ಯಮ್ಮ, ಉಪಾಧ್ಯಕ್ಷ ಸೋಮಶೇಖರ್, ಸೆಸ್ಕಾಂ ನಾಮಿನಿ ನಿರ್ದೇಶಕ ಮಂಜುನಾಥ್, ಚಿಕ್ಕೇಗೌಡ, ವಿಜಿಕುಮಾರ್, ಬಸವರಾಜು, ಮಹೇಶ್, ಮಾಲತೇಶ್ ಮೊದಲಾದವರಿದ್ದರು.

## ಪೋಕ್ಸೋ ಕಾಯ್ದೆ ಜಾಗೃತಿಗೆ ಸೂಚನೆ

» ಮೊದಲನೇ ಪುಟದಿಂದ

ಜಿಲ್ಲಾ ಮಟ್ಟದ ಅನುಪಾಲನಾ ಅಧಿಕಾರಿಗಳ ಜವಾಬ್ದಾರಿಯನ್ನು ಹೆಚ್ಚಿಸುವ ಮೂಲಕ ಮಕ್ಕಳಿಗೆ ಸಂರಕ್ಷಣೆ ನೀಡಲಾಗುತ್ತಿದೆಯೆಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಹೆಚ್.ಎಂ.ದೇವರಾಜು ಅವರು ಮಾತನಾಡಿ, ತ್ವರಿತಗತಿಯಲ್ಲಿ ಪೋಕ್ಸೋ ಪ್ರಕರಣ ವಿಲೇವಾರಿಗೆ ಪ್ರತಿ ಜಿಲ್ಲೆಯಲ್ಲೂ ಶೀಘ್ರ ವಿಲೇವಾರಿ ನ್ಯಾಯಾಲಯ ತೆರೆಯಲಾಗಿದೆ. ಪ್ರತಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಅವಧಿ ನಿಗದಿಪಡಿಸಲಾಗಿದೆ. ಅಪರಾಧ ರುಜುವಾತಾದ ಪ್ರಕರಣಗಳಲ್ಲಿ ಕಾಯ್ದೆಯನುಸಾರ ಶಿಕ್ಷೆ ವಿಧಿಸಲಾಗುತ್ತಿದೆ ಎಂದರು.

ಬಾಲ ನ್ಯಾಯ ಮಂಡಳಿ ಅಧ್ಯಕ್ಷ ಗಿರಿಗೌಡ ಅವರು ಮಾತನಾಡಿ, ಬಾಲ ನ್ಯಾಯ ಮಂಡಳಿಯಲ್ಲಿ ಸಂಘರ್ಷಕ್ಕೊಳಗಾದ ಮಕ್ಕಳಿಗೆ ಅಪರಾಧಿ ಮನೋಭಾವ ಬೆಳೆಯದಂತೆ ಮನೆಯ ವಾತಾವರಣವನ್ನು ಕಲ್ಪಿಸಿ ಉತ್ತಮ ಪ್ರಜೆಗಳಾಗುವಂತೆ ಮಾಡಲಾಗುವುದು. ಶೀಘ್ರವಾಗಿ ಪ್ರಕರಣ ವಿಲೇವಾರಿ ಮಾಡಲಾಗುವುದು ಎಂದು ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಅವರು ಮಾತನಾಡಿ, ಪ್ರತಿ ತಿಂಗಳು ನಡೆಯುವ ಸಭೆಯಲ್ಲಿ ಕೇವಲ ಅಂಕಿ-ಅಂಶಗಳ ಪರಿಶೀಲನೆ ಮಾಡದೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಲ್ಲಿ ಸಂಬಂಧಿಸಿದ ಇಲಾಖೆಗಳ ಸಹಯೋಗದಲ್ಲಿ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಕಾನೂನು ನೆರವು ಅಭಿಕ್ಷಕ ರನ್ನು ನೇಮಿಸಿಕೊಳ್ಳಲಾಗಿದೆ. ಪ್ರತಿ ಶಾಲಾ- ಕಾಲೇಜುಗಳಲ್ಲಿ ನಿರಂತರವಾಗಿ ಪೋಕ್ಸೋ ಕಾಯ್ದೆ ಮಕ್ಕಳ ಅಪರಾಧಗಳ ಬಗ್ಗೆ ಅರಿವು ಕಾರ್ಯಕ್ರಮ ಹೆಚ್ಚಿಸುವಂತೆ ಅವರು ಸೂಚಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಜಿಲ್ಲಾಧಿಕಾರಿ ಕಚೇರಿ ಸಹಾಯಕ ರಮೇಶ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ದಿಲೀಪ್, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಎಂ.ಎಸ್.ಮಧುಕುಮಾರಿ ಇದ್ದರು.

## ಸಾಹಿತಿ ಭೈರಪ್ಪ, ಹೋರಾಟಗಾರ ಶಿವಣ್ಣಗೆ ಶ್ರದ್ಧಾಂಜಲಿ

» ಮೊದಲನೇ ಪುಟದಿಂದ

ಯುವಕರಿಗೆ ದೇಶ ಪ್ರೇಮದ ಕುರಿತು ಮಾಡುತ್ತಿದ್ದ ಭಾಷಣ ಪ್ರೇರಣಾದಾಯಕವಾಗಿತ್ತು ಎಂದರು.

ಎಸ್.ಎಲ್.ಭೈರಪ್ಪ ಅವರ ಸಾಹಿತ್ಯ ಕೃಷಿಗೆ ಹೋಲಿಕೆ ಯಾರಿಂದಲೂ ಸಾಧ್ಯವಿಲ್ಲ. ಪ್ರಸ್ತುತ ದಿನಗಳಲ್ಲಿ ಒಂದೆರಡು ಪುಸ್ತಕ ಬರೆದು ತಾವು ದೊಡ್ಡ ಸಾಹಿತಿ ಎಂದು ಕರೆಸಿಕೊಳ್ಳುವ ಪರಿಸ್ಥಿತಿಯಲ್ಲಿ ಭೈರಪ್ಪನವರು ಎಂದಿಗೂ ಪ್ರಚಾರದ ಹಿಂದೆ ಬಿದ್ದವರಲ್ಲ. ಉತ್ಸವ ಮೂರ್ತಿಯಾಗದೆ ಮೂಲ ಮೂರ್ತಿಯಾಗಿ ನಿರಂತರ ಬರವಣಿಗೆಯಲ್ಲಿ ತೊಡಗಿದ್ದರು. ಯಾವುದೇ ಟೀಕೆಗಳಿಗೆ ಕಿವಿಗೊಡದೆ ನೇರ ಬರವಣಿಗೆ ಮೂಲಕ ಅಪಾರ ಓದುಗ ಬಳಗ ಸೃಷ್ಟಿಸಿಕೊಂಡಿದ್ದಾರೆ. ಪ್ರಶಸ್ತಿಗಳ ಹಿಂದೆ ಬೀಳದೆ ಬಡ ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ಸಹಾಯ ಮಾಡಿದ ಭೈರಪ್ಪ ಮಾದರಿಯಾಗಿದ್ದಾರೆಂದರು.

ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞೆ ಡಾ॥ ಎ.ಸಾವಿತ್ರಿ, ಲೇಖಕಿ ಸೀತಮ್ಮ ವಿವೇಕ್, ಟ್ರಸ್ಟ್ ಸದಸ್ಯರಾದ ಜಗದಾಂಬ, ಲಕ್ಷ್ಮೀ, ಶಶಿಕಲಾ, ಕಾಂಚನಮಾಲಾ, ಸುಮನಾ, ಜಯಪ್ರಕಾಶ್ ಮತ್ತಿತರರಿದ್ದರು.

## ಅ.1ರಂದು ಅಂತರರಾಷ್ಟ್ರೀಯ ಕಾಫಿ ದಿನಾಚರಣೆ

• ಪ್ರಜೋದಯ ವರದಿ




**ಸಕಲೇಶಪುರ:** ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಆಶ್ರಯದಲ್ಲಿ ಅಕ್ಟೋಬರ್ 1ರಂದು 11ನೇ ಅಂತರರಾಷ್ಟ್ರೀಯ ಕಾಫಿ ದಿನಾಚರಣೆಯನ್ನು ಹಬ್ಬದ ರೀತಿಯಲ್ಲಿ ಸಂತಸ ಸಡಗರದಿಂದ ಆಚರಿಸಲು ಸಜ್ಜಾಗಿದೆ ಎಂದು ಸಂಘದ ಕಾರ್ಯದರ್ಶಿ ಲೋಹಿತ್ ಕೌಡಹಳ್ಳಿ ತಿಳಿಸಿದರು.

ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭಾರತದ ಕಾಫಿಯನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವದ್ದಾಗಿವೆ. ಕಾಫಿ ಕೃಷಿ ನಮ್ಮ ಜೀವನಾಧಾರ. ಬೆಳೆಗಾರರು ಮತ್ತು ತೋಟ ಕಾರ್ಮಿಕರು ಎದುರಿಸುತ್ತಿರುವ ಸವಾಲುಗಳನ್ನು ಸಮಾಜಕ್ಕೆ ತಿಳಿಸುವುದೇ ಈ ದಿನಾಚರಣೆಯ ಉದ್ದೇಶ ಎಂದು ಹೇಳಿದರು.

ಅ.1 ರ ಬೆಳಿಗ್ಗೆ 10:30ಕ್ಕೆ ಶ್ರೀ ಸಕಲೇಶ್ವರಸ್ವಾಮಿ ದೇವಸ್ಥಾನದಿಂದ ಶ್ರೀ ಬಸವೇಶ್ವರ ಪುತ್ಥಳಿವರೆಗೆ ಕಾಲ್ನಡಿಗೆ ಜಾಥಾ ನಡೆಸಿ ನಂತರ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಹತ್ತಿರ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಕಂದಾಯ ಸಚಿವ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಹಾಸನ ಜಿಲ್ಲಾ ಸಂಸದರು, ಶಾಸಕರು, ಕಾಫಿ ಮಂಡಳಿಯ ಅಧ್ಯಕ್ಷ ಎಂ.ಜೆ. ದಿನೇಶ್, ಸಿಇಓ ಕೂರ್ಮಾರಾವ್, ಕನ್ನಡ ಚಿತ್ರರಂಗದ ಹಿರಿಯ ನಟ ದೊಡ್ಡಣ್ಣ, ಮಿಸ್ ಯೂನಿವರ್ಸ್ ಕರ್ನಾಟಕ ಡಾ. ವಂಶಿ ಉದಯ್, ನಟ ವಿಶ್ವರಾಜ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಸುಮಾರು 3,000 ಕಾಫಿ ಪ್ರಿಯರಿಗೆ ಉಚಿತವಾಗಿ ಪರಿಶುದ್ಧ ಕಾಫಿ ವಿತರಿಸಲಾಗುವುದು. ಕಾಫಿ ಬೆಳೆಗಾರರು, ಪ್ರವಾಸಿಗರು ಹಾಗೂ ಸಾರ್ವಜನಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಹೇಳಿದರು.

ಬೆಕ್ನಹಳ್ಳಿ ನಾಗರಾಜ್ ಅವರು ಮಾತನಾಡಿ, ಅಂತರರಾಷ್ಟ್ರೀಯ ಕಾಫಿ ಸಂಘಟನೆಯು ಅಕ್ಟೋಬರ್ 1ನ್ನು ಅಂತರರಾಷ್ಟ್ರೀಯ ಕಾಫಿ ದಿನವಾಗಿ ಘೋಷಿಸಿದ್ದು, ಬೆಳೆಗಾರ ಸಂಘಟನೆಗಳು 2015 ರಿಂದ ಈ ದಿನಾಚರಣೆಯನ್ನು ಸಂಭ್ರಮದಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸುತ್ತಿವೆ. 11ನೇ ದಿನಾಚರಣೆಯನ್ನು ಹಬ್ಬದಂತೆ ನಡೆಸಲು ಎಲ್ಲರೂ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಕಾಫಿ ನಡೆದು ಬಂದ ದಾರಿ, ಪರಿಸರಕ್ಕೆ ಕಾಫಿ ಕೃಷಿಯ ಕೊಡುಗೆಗಳು ಮತ್ತು ಕಾಫಿಯ ಆರೋಗ್ಯಕರ ಗುಣಲಕ್ಷಣಗಳನ್ನು ಸಾರ್ವಜನಿಕರಿಗೆ ತಲುಪಿಸೋದು ಮುಖ್ಯ. ಜೊತೆಗೆ ಕಾಫಿ ಉದ್ಯಮದಲ್ಲಿ ಇರುವ ಕುಂದು ಕೊರತೆಗಳನ್ನು ಬೆಳಕುಗೆಟ್ಟಿಸಿ, ದೇಶೀಯ ಬಳಕೆಯನ್ನು ಮತ್ತು ಕಾಫಿ ಉತ್ಪನ್ನಗಳ ಪ್ರಚಾರವನ್ನು ಹೆಚ್ಚಿಸುವ ಉದ್ದೇಶವಿದ್ದಾಗಿದೆ ಎಂದರು.

ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ಎ.ಎಸ್.ಪರಮೇಶ್, ಉಪಾಧ್ಯಕ್ಷ ಮಂಜುನಾಥ್ ಶೆಟ್ಟಿ, ಸಚಿನ್, ಬೆಳೆಗಾರ ಪತ್ರಿಕೆಯ ಸಂಪಾದಕ ಸುರೇಂದ್ರ, ಇನ್ನಿತರರು ಉಪಸ್ಥಿತರಿದ್ದರು.

## ಜೆಡಿಎಸ್ ಪಕ್ಷ ಬಲವರ್ಧನೆಗೆ ಕ್ರಮ

• ಪ್ರಜೋದಯ ವರದಿ

ಸಕಲೇಶಪುರ: ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಜೆಡಿಎಸ್ ಪಕ್ಷ ಬಲವರ್ಧನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಜೆಡಿಎಸ್ ನಾಯಕ ವಳಲಹಳ್ಳಿ ಪ್ರಸಾದ್ ಗೌಡ ತಿಳಿಸಿದರು

ಶನಿವಾರ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ ಸಂಘಟನೆಗೆ ಕರೆ ನೀಡಿದ್ದಾರೆ. ಶೀಘ್ರದಲ್ಲೇ ಸಕಲೇಶಪುರ ತಾಲೂಕಿಗೆ ನೂತನ ಜೆಡಿಎಸ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ನೇಮಕ ನಡೆಯಲಿದೆ ಎಂದು ಹೇಳಿದರು.

ಜೆಡಿಎಸ್ ಪಕ್ಷ ತಾಲೂಕಿನಲ್ಲಿ ಈಗಲೂ ಸದೃಢವಾಗಿದೆ. ಜೆಡಿಎಸ್ ಅವಧಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಹಲವು ಅಭಿವೃದ್ಧಿ ಕಾರ್ಯಗಳು ನಡೆದಿವೆ. ನಮ್ಮ ಪಕ್ಷ ಮಾಡಿದ ಸಾಧನೆ ಮತ್ತು ಅಭಿವೃದ್ಧಿ ಕೆಲಸಗಳು ಜನಮನದಲ್ಲಿ ಮುದ್ರಿತವಾಗಿವೆ. ವಳಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಡೆಯುತ್ತಿರುವ ಪಕ್ಷಾಂತರ ತಾತ್ಕಾಲಿಕ ಅಷ್ಟೇ. ಬಿಜೆಪಿ ಸೇರಿದವರು ಕಾಂಗ್ರೆಸ್ ಕಾರ್ಯಕರ್ತರನ್ನು ಶಾಲು ಹಾಕಿ ಸೇರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

## ಸಂಭ್ರಮದ ಶ್ರೀ ಚೌಡೇಶ್ವರಿ ರಥೋತ್ಸವ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಗ್ರಾಮದೇವತೆ ಶ್ರೀ ಚೌಡೇಶ್ವರಿ ದೇವಿಯ ನವರಾತ್ರಿ ಆಚರಣೆಯ ನಾಲ್ಕನೇ ದಿನವಾದ ಶುಕ್ರವಾರ ರಾತ್ರಿ ಚಿಕ್ಕ ರಥೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ಕಣಕೂರು ಶ್ರೀ ಕೆಂಪಮ್ಮದೇವಿ ಒಕ್ಕಲಿನವರು ಈ ರಥೋತ್ಸವದ ನೇತೃತ್ವ ವಹಿಸಿದ್ದರು. ವಿವಿಧ ಪುಷ್ಪಗಳಿಂದ ಶೃಂಗಾರ ಮಾಡಿದ್ದ ದೇವಿಗೆ ರಾತ್ರಿ 8 ಗಂಟೆಗೆ ಪೂಜೆ ಸಲ್ಲಿಸಿ ವಿದ್ಯುತ್ ದೀಪಗಳಿಂದ ಅಲಂಕಾರಗೊಂಡಿದ್ದ ತೇರಿನ ಮೇಲೆ ಉತ್ಸವ ಮೂರ್ತಿಯನ್ನು ಕೂರಿಸಲಾಯಿತು.

ಮಂಗಳವಾದ್ಯದೊಂದಿಗೆ ರಥೋತ್ಸವ ಪ್ರಾರಂಭವಾಯಿತು. ದೊಡ್ಡ ಬೀದಿ ಮೂಲಕ ಉಯ್ಯಾಲೆ ಕಂಬದ ಆವರಣಕ್ಕೆ ರಥವು ತಲುಪಿತು. ಗೌರಿ, ಗಣೇಶ ಮೂರ್ತಿಗೆ ಪೂಜೆ ಸಲ್ಲಿಸಲಾಯಿತು. ನಂತರ ಚಿಕ್ಕ ಬೀದಿ, ಬ್ರಾಹ್ಮಣರ ಬೀದಿ ಮೂಲಕ ದೇವಸ್ಥಾನದವರೆಗೆ ತೇರನ್ನು ಭಕ್ತರು ಎಳೆದರು. ರಥೋತ್ಸವಕ್ಕೆ ಬಂದಿದ್ದ ಭಕ್ತರಿಗೆ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ನವರಾತ್ರಿ ಆಚರಣೆ ಪ್ರಯುಕ್ತ ಪ್ರತಿದಿನ ರಾತ್ರಿ ದೇವಿಯವರ ಉತ್ಸವ ನಡೆಯುತ್ತಿದೆ.

ಚೌಡೇಶ್ವರಿ ದೇವಸ್ಥಾನದ ಆವರಣದಲ್ಲಿ ಈ ವರ್ಷ ಆರು ಚಂಡಿಕಾ ಹೋಮಗಳನ್ನು ಏರ್ಪಡಿಸಲಾಗಿದೆ. ಗುರುವಾರ ನಡೆಯುವ ದಸರಾ ಮೆರವಣಿಗೆಗೆ ಎಲ್ಲ ಸಿದ್ದತೆ ಮಾಡಲಾಗುತ್ತಿದೆ ಎಂದು ದೇವಾಲಯದ ಸಮಿತಿಯವರು ತಿಳಿಸಿದ್ದಾರೆ.

## ಪ್ರವಾಸಿಗರ ಸ್ನೇಹಿಯಾಗಿ ಪ್ರವಾಸೋದ್ಯಮ ಬೆಳೆಯಲಿ

» ಮೊದಲನೇ ಪುಟದಿಂದ

ಜೊತೆಗೆ ಅಲ್ಲಲ್ಲಿ ಕಸದ ಬುಟ್ಟಿಗಳ ಇಟ್ಟು ಸೌಂದರ್ಯ ಕಾಪಾಡ ಬೇಕು. ದೇವಾಲಯ ಆವರಣದಲ್ಲಿ ಗಿಡಗಳನ್ನು ಬೆಳೆಸಿ, ಪಾರ್ಕಿಂಗ್ ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡಬೇಕೆಂದರು.

ರಸ್ತೆ ಬದಿಯ ವ್ಯಾಪಾರಿಗಳು ಅಂಗಡಿ ಮುಂದೆ ಕಸದ ಬುಟ್ಟಿಗಳನ್ನು ಇಡುವಂತೆ ನೋಟೀಸ್ ಜಾರಿ ಮಾಡಬೇಕೆಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಹೇಳಿದರು.

ಹಳೇಬೀಡು ದೇವಾಲಯದ ಮುಂಭಾಗದಲ್ಲಿ ರಸ್ತೆ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ತುರ್ತಾಗಿ ಕೆಲಸ ಪೂರ್ಣಗೊಳಿಸಬೇಕು. ರಸ್ತೆ ಬದಿ ವ್ಯಾಪಾರಿಗಳಿಗೆ ಇ-ಶ್ರಮ್‌ಕಾರ್ಡ್ ವಿತರಣೆ ಮಾಡಿದರೆ ಅವರಿಗೆ ವ್ಯಾಪಾರಕ್ಕೆ ಸ್ಥಳಾವಕಾಶವಿಲ್ಲ ಎಂಬ ಭಯ ನಿವಾರಣೆ ಆಗುತ್ತದೆಂದರು.

ದೊಡ್ಡಗದ್ದವಳ್ಳಿಯ ಇತಿಹಾಸ ಪ್ರಸಿದ್ಧ ದೇವಾಲಯಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಜೊತೆಗೆ ಮಾತನಾಡಿದ ಸ್ಥಳೀಯರು, ಶೌಚಾಲಯ, ಕುಡಿಯುವ ನೀರು ಇನ್ನಿತರ ಮೂಲ ಸೌಕರ್ಯಗಳ ಸಮಸ್ಯೆಗಳ ಕುರಿತಾಗಿ ನೀಡಿದ ಮಾಹಿತಿಯ ಮೇರೆಗೆ ಸ್ಥಳದಲ್ಲಿಯೇ ಪುರಾತತ್ವ ಇಲಾಖೆಯ ಅಧಿಕಾರಿಗಳಿಗೆ ಕರೆ ಮಾಡಿ ಕ್ರಮ ವಹಿಸಲು ಸೂಚಿಸಿದರಲ್ಲದೆ, ದೇವಾಲಯದ ಭಾವಚಿತ್ರವನ್ನು ತೆಗೆದು ಪ್ರವಾಸಿಗರಿಗೆ ಅನುಕೂಲವಾಗುವಂತೆ ಹಾಸನ ಚಿಕ್ಕಮಗಳೂರು ಮಾರ್ಗ ಮಧ್ಯದಲ್ಲಿ ದೊಡ್ಡಗದ್ದವಳ್ಳಿಯ ಪ್ರವೇಶ ದ್ವಾರದಲ್ಲಿ ಫಲಕ ಅಳವಡಿಸುವಂತೆ ಸೂಚನೆ ನೀಡಿದರು.

ಪ್ರವಾಸೋದ್ಯಮ ಇಲಾಖೆ ಪ್ರಭಾರ ಉಪ ನಿರ್ದೇಶಕ ಅರುಣ್‌ಕುಮಾರ್ ಸಂಗಾವಿ, ಬೇಲೂರು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಹಾಜರಿದ್ದರು.

## ತ್ರಿವಳಿ ಗಂಡು ಮಕ್ಕಳಿಗೆ ಜನ್ಮ ನೀಡಿದ ತಾಯಿ



• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ಮತ್ತೊಬ್ಬ ತಾಯಿ ತ್ರಿವಳಿ ಮಕ್ಕಳಿಗೆ ಜನ್ಮ ನೀಡಿದ್ದಾರೆ. ಈ ತಿಂಗಳಲ್ಲಿ ಜಿಲ್ಲೆಯಲ್ಲಿ ಇದು ಎರಡನೇ ಪ್ರಕರಣವಾಗಿದೆ.

ತಾಲ್ಲೂಕಿನ ಕಟ್ಟಾಯ ಮೂಲದ 40 ವರ್ಷ ಮಹಿಳೆಯೊಬ್ಬರು ವಿವಾಹವಾಗಿ 16 ವರ್ಷಗಳಾದರೂ ಮಕ್ಕಳಾಗದ ಕಾರಣ ನಗರದ ಶಿವ್ಯ ಐವಿಎಫ್ ಆಸ್ಪತ್ರೆಯಲ್ಲಿ ಸಂತಾನೋತ್ಪತ್ತಿ ಚಿಕಿತ್ಸೆ ಪಡೆದುಕೊಂಡು ಗರ್ಭಧರಿಸಿದ್ದರು. ಆಸ್ಪತ್ರೆಯ ಪ್ರಸೂತಿ ಸ್ತ್ರೀರೋಗ ತಜ್ಞರಾದ ಡಾ.ಭವ್ಯ ಸುನಿಲ್, ಮಕ್ಕಳ ತಜ್ಞ ಡಾ.ಸುನಿಲ್ ಕುಮಾರ್ ಅವರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿ ಮಕ್ಕಳನ್ನು ಹೊರತೆಗೆದಿದ್ದಾರೆ. ಮೂರೂ ಮಕ್ಕಳೂ ಗಂಡು ಆಗಿವೆ.

ಜನನದ ವೇಳೆ ಮಕ್ಕಳ ತೂಕ ಕ್ರಮವಾಗಿ 1.8 ಕೆ.ಜಿ.1.5 ಕೆ.ಜಿ. ಮತ್ತು 1.1 ಕೆ.ಜಿ.ಗಳಾಗಿತ್ತು. ಮೂರು ಮಕ್ಕಳು ಆರೋಗ್ಯವಾಗಿದ್ದು ಶಿವ್ಯ ಐವಿಎಫ್ ಆಸ್ಪತ್ರೆಯ ನವಜಾತ ಶಿಶು ತೀವ್ರ ನಿಗಾ ಘಟಕದಲ್ಲಿ ವಿಶೇಷ ಆರೈಕೆಯನ್ನು ಪಡೆದು, ಇದೀಗ ಸಂಪೂರ್ಣ ಆರೋಗ್ಯದಿಂದ ತಾಯಿಯ ಮಡಿಲಿಗೆ ಸೇರಿದ್ದಾರೆ.

ಸದ್ಯ ತಾಯಿ ಮತ್ತು ಮಕ್ಕಳು ಆರೋಗ್ಯದಿಂದ ಇದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಇತ್ತೀಚೆಗಷ್ಟೇ ನಗರದ ಹಿಮ್ಸ್ ಆಸ್ಪತ್ರೆಯಲ್ಲಿ ತಾಯಿಯೊಬ್ಬರು ಇಬ್ಬರು ಹೆಣ್ಣು ಮಕ್ಕಳು ಸೇರಿ ಮೂವರು ಗಂಡು ಮಕ್ಕಳಿಗೆ ಜನ್ಮ ನೀಡಿದ್ದರು.

## ಘಟನೆಗಳನ್ನು ಅನುಭವಿಸಿ ಕಾದಂಬರಿ ರಚಿಸುತ್ತಿದ್ದ ಭೈರಪ್ಪ

• ಪ್ರಜೋದಯ ವರದಿ



**ಹಾಸನ:** ಸಾಹಿತಿ, ಕಾದಂಬರಿಕಾರ ದಿ॥ ಡಾ.ಎಸ್.ಎಲ್.ಭೈರಪ್ಪನವರು ವಾಸ್ತವಿಕತೆಯನ್ನು ಅರಿತು ಘಟನೆಗಳನ್ನು ಅನುಭವಿಸಿ ಕಥೆ ಕಾದಂಬರಿಯನ್ನು ರಚನೆ ಮಾಡುತ್ತಿದ್ದರು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಜಾವಗಲ್ ಪ್ರಸನ್ನ ಹೇಳಿದರು.

ನಗರದ ಅಕ್ಷರ ಬುಕ್ ಹೌಸ್‌ನಲ್ಲಿ ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಡಾ.ಎಸ್.ಎಲ್. ಭೈರಪ್ಪ ಅವರ ನಿಧನಕ್ಕೆ ಹಮ್ಮಿಕೊಂಡಿದ್ದ ಸಂತಾಪ ಸಭೆಯಲ್ಲಿ ಮೃತರರಿಗೆ ಸಂತಾಪ ಸೂಚಿಸಿ ಮಾತನಾಡಿದ ಅವರು, ಭೈರಪ್ಪ ಅವರ ಪ್ರತಿಯೊಂದು ಪುಸ್ತಕಗಳು ಒಂದೊಂದು ಮುತ್ತಿನ ಹವಳದಂತೆ ಇವೆ. ಒಂದು ಪುಸ್ತಕಗಳಿಗಿಂತ ಮತ್ತೊಂದು ಪುಸ್ತಕಗಳು ಹೆಚ್ಚು ಭಿನ್ನವಾಗಿವೆ ಎಂದರು.

ಓದುಗನಿಗೆ ಯಾವುದೇ ಹಂತದಲ್ಲೂ ಬೇಸರ ಬಾರದಂತೆ ಅವರ ಸಾಲುಗಳು ರಚನೆ ಆಗಿದೆ. 500 ಪುಟಗಳಿಗೂ ಅಧಿಕ ಇರುವ ಕಾದಂಬರಿಯನ್ನು ಓದಿಸುವ ಶಕ್ತಿ ಇದಿದ್ದು, ಭೈರಪ್ಪ ಅವರಿಗೆ ಮಾತ್ರ. ಅವರು ಯಾವುದೇ ಕಾದಂಬರಿಗಳನ್ನು ರಚನೆ ಮಾಡುವ ಮುನ್ನ ವಾಸ್ತವಿಕತೆಗೆ ಹತ್ತಿರವಾಗಿ ಘಟನೆಗಳನ್ನು ಅನುಭವಿಸಿ ಸಾಲುಗಳನ್ನು ರಚನೆ ಮಾಡುತ್ತಿದ್ದರು. ಅವರು ಬರೆದಿರುವ ಬಹುತೇಕ ಪುಸ್ತಕಗಳು ಇತರೆ ಭಾಷೆಗೆ ಭಾಷಾಂತರವಾಗಿದೆ. ಕನ್ನಡದಿಂದ ಅತೀ ಹೆಚ್ಚು ಪುಸ್ತಕಗಳು ಭಾಷಾಂತರವಾಗಿರುವ ಪುಸ್ತಕಗಳ ಪೈಕಿ ಭೈರಪ್ಪನವರ ಪುಸ್ತಕಗಳಿಗೆ ಸಲ್ಲುತ್ತದೆ ಎಂದು ಹೇಳಿದರು.

ರೋಟರಿ ರಾಯಲ್ ಅಧ್ಯಕ್ಷ ಹಾಗೂ ಅಕ್ಷರ ಬುಕ್ ಹೌಸ್ ಮಾಲೀಕ ಟೈಮ್ಸ್ ಬಿ.ಕೆ.ಗಂಗಾಧರ ಮಾತನಾಡಿ, ಡಾ.ಎಸ್.ಎಲ್.ಭೈರಪ್ಪ ನವರು ನಮ್ಮ ಜಿಲ್ಲೆಯವರು ಎಂದು ಹೇಳಿಕೊಳ್ಳಲು ನಮಗೆ ಹೆಮ್ಮೆ ಇದೆ. ಇಡೀ ಕನ್ನಡ ನಾಡಿನ ಸಾಹಿತ್ಯ ಲೋಕಕ್ಕೆ ಆಧುನಿಕ ಕಾಲದ ಶಕ್ತಿದಾಯಕರಾದ ಅವರನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಕನ್ನಡ ಸಾಹಿತ್ಯ ಲೋಕ ಬಡವಾಗಿದೆ ಎಂಬ ಪದಕ್ಕೆ ಇಂದು ನಿಜವಾದ ಅರ್ಥಪೂರ್ಣವಾಗಿದೆ ಎಂದು ಹೇಳಿದರು.

ಭೈರಪ್ಪ ಅವರನ್ನು ಕಳೆದ ಕೆಲವು ವರ್ಷಗಳ ಹಿಂದೆ ಇದೇ ಅಕ್ಷರ ಬುಕ್ ಹೌಸ್‌ಗೆ ಕರೆಸಲಾಗಿತ್ತು. ಆ ವೇಳೆ ಅವರು ತಮ್ಮ ಪುಸ್ತಕಗಳನ್ನು ನೋಡಿ ಸಂತಸಪಟ್ಟಿದ್ದರು. ಅದಷ್ಟು ಸಾಲದು ಎಂಬಂತೆ ಯಾವ ಪುಸ್ತಕವನ್ನು ಯಾವ ಕಾಲಘಟ್ಟದಲ್ಲಿ ಹಾಗೂ ಯಾವ ಸನ್ನಿವೇಶದಲ್ಲಿ ರಚನೆ ಮಾಡಿದ್ದೆ ಎಂದು ಹೇಳುವ ಮೂಲಕ ತಮ್ಮ ಜ್ಞಾಪನ ಶಕ್ತಿಯನ್ನು ತೋರಿದ್ದರು. ಅವರ ಪ್ರತಿಯೊಂದು ಪುಸ್ತಕಗಳೂ ಓದುಗನಿಗೆ ಸದಾ ಓದಬೇಕೆನ್ನಿಸುತ್ತದೆ ಎಂದರು.

ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಚಿನ್ನೇನಹಳ್ಳಿ ಸ್ವಾಮಿ, ಕಾರ್ಯದರ್ಶಿ ರಘುನಂದನ್, ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಖಜಾಂಚಿ ಎಚ್.ಕೆ.ದಿಲೀಪ್ ಕುಮಾರ್, ಸದಸ್ಯರಾದ ಸಚ್ಚಿನ್, ಯೋಗೇಶ್, ಡಾ. ವಿಕ್ರಂ, ಪುನೀತ್, ಶ್ರೀನಂದ್, ಅಕ್ಷರ ಬುಕ್ ಹೌಸ್ ವ್ಯವಸ್ಥಾಪಕ ಮಂಜು ಇತರರು ಹಾಜರಿದ್ದರು.

## 2030ಕ್ಕೆ ಏಡ್ಸ್ ನಿರ್ಮೂಲನೆ ಗುರಿ

» ಮೊದಲನೇ ಪುಟದಿಂದ





ಹೆಚ್ಚು ಪ್ರೌಢಶಾಲೆಗಳಲ್ಲಿ ಹದಿ ಹರೆಯದವರಿಗೆ ಆರೋಗ್ಯ ಶಿಕ್ಷಣ, ಕಾಲೇಜುಗಳಲ್ಲಿ ರೆಡ್ ರಿಬ್ಬನ್ ಕ್ಲಬ್ ಮುಖಾಂತರ ವಿದ್ಯಾರ್ಥಿಗಳಿಗೆ ಜಾಗೃತಿ, 360 ಗ್ರಾಮ ಮಟ್ಟದ ವಿಶೇಷ ಸಭೆ, ಚನ್ನರಾಯ ಪಟ್ಟಣ ತಾಲ್ಲೂಕಿನಲ್ಲಿ 75,000ಕ್ಕೂ ಹೆಚ್ಚು ಮನೆ ಮನೆಗೆ ತಲುಪಿ ಜನ ಜಾಗೃತಿ ಮೂಡಿಸಲಾಗಿದೆ ಎಂದರು.

ಕಾಯಿಲೆ ನಿಯಂತ್ರಣಕ್ಕೆ ಔಷಧೋಪಚಾರವಷ್ಟೇ ಸಾಕಾಗುವುದಿಲ್ಲ. ಜನರ ಪಾಲ್ಗೊಳ್ಳುವಿಕೆಯೂ ಮುಖ್ಯ. ಹೆಚ್‌ಐವಿ ಬಗ್ಗೆ ಸರಿಯಾದ ಮಾಹಿತಿ ಹೊಂದುವುದು ಅತ್ಯುತ್ತಮ ಔಷಧ. ಹಾಸನವನ್ನು ಹೆಚ್‌ಐವಿ ಮುಕ್ತ ಜಿಲ್ಲೆ ಮಾಡಲು ಎಲ್ಲರೂ ಕೈ ಜೋಡಿಸಬೇಕೆಂದು ಕೋರಿದರು.

ಇಂಜಿನೀಯರಿಂಗ್ ಕಾಲೇಜು ಆವರಣದಿಂದ ಪ್ರಾರಂಭವಾದ ಮ್ಯಾರಾಥಾನ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ತಲುಪಿ ಸಮಾಪ್ತಿಯಾಯಿತು. ವಿದ್ಯಾರ್ಥಿಗಳು, ಯುವಕರು, ಕ್ರೀಡಾಪಟುಗಳು ಹಾಗು ಸ್ವಯಂ ಸೇವಕರು ಪಾಲ್ಗೊಂಡರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ॥ ವಿಜಯ್ ಗೊರೂರು, ಜಿಲ್ಲಾ ಕಾರ್ಯಕ್ರಮಾಧಿಕಾರಿ ಡಾ॥ ನಾಗೇಶ್ ಆರಾಧ್ಯ, ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಪ್ರಾಂಶುಪಾಲ ಡಾ. ಹರೀಶ್, ಎನ್‌ಸಿಸಿ ಅಧಿಕಾರಿ ಶಂಕರ್, ಲಯನ್ಸ್ ಕ್ಲಬ್‌ನ ಹೆಚ್.ಕೆ.ನಾಗೇಶ್, ಹಾಸನಾಂಬ ಕ್ಲಬ್‌ನ ಮೋಹನ್ ಕುಮಾರ್, ತಿಮ್ಮಪ್ಪಶೆಟ್ಟಿ, ಕೇಶವ ಮೂರ್ತಿ, ರೋಟರಿ ಕ್ಲಬ್‌ನ ಪ್ರಸನ್ನ ಕುಮಾರ್, ಮಂಜುನಾಥ್, ಸಿದ್ದೇಶ್, ಯೋಗೀಶ್, ರೆಡ್ ಕ್ರಾಸ್‌ನ ಶಬೀರ್ ಅಹಮದ್, ಡಾ॥ತೇಜಸ್ವಿ ಇದ್ದರು.

## ವಿಶೇಷ ಪೂಜೆ



• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕು ಕಾಮನಹಳ್ಳಿ ಗ್ರಾಮದೇವತೆ ಶ್ರೀ ಲಕ್ಷ್ಮೀದೇವಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ಶನಿವಾರ ಅರಿಶಿನ, ಕುಂಕುಮ ಮತ್ತು ಗಂಧದ ಅಲಂಕಾರ ಮಾಡಲಾಗಿದ್ದು ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಇದೇ ಸಂದರ್ಭದಲ್ಲಿ ದೇವಿಯ ದರ್ಶನ ಪಡೆದು ಭಕ್ತರು ಸಂಭ್ರಮಿಸುವ ಮೂಲಕ ಧನ್ಯತೆ ಪಡೆದರು.

## ಸ್ವದೇಶಿ 4ಜಿ ನೆಟ್‌ವರ್ಕ್: ದಿಗ್ಗಜ ದೇಶಗಳ ಸಾಲಿಗೆ ಭಾರತ

• ಪ್ರಜೋದಯ ವರದಿ



**ನವದೆಹಲಿ:** ಭಾರತವು ತನ್ನದೇ ಆದ ಸ್ವದೇಶಿ 4-ಜಿ ತಂತ್ರಜ್ಞಾನವನ್ನು ಯಶಸ್ವಿಯಾಗಿ ಆರಂಭಿ ಸಿದೆ. ಈ ಮೂಲಕ ದೂರಸಂಪರ್ಕ ಉಪಕರಣಗಳನ್ನು ಸ್ವತಃ ತಯಾರಿಸುವ ಚೀನಾ, ಡೆನ್ಮಾರ್ಕ್, ಸ್ವೀಡನ್ ಮತ್ತು ದಕ್ಷಿಣ ಕೊರಿಯಾದಂತಹ ರಾಷ್ಟ್ರಗಳ ಪ್ರತಿಷ್ಠಿತ ಪಟ್ಟಿಗೆ ಭಾರತ ಕೂಡ ಸೇರ್ಪಡೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಬಿಎಸ್‌ಎನ್‌ಎಲ್‌ನ ಮಹತ್ವಾಕಾಂಕ್ಷೆಯ ಯೋಜನೆಗೆ ಒಡಿಶಾದಲ್ಲಿ ಚಾಲನೆ ನೀಡಿದ್ದಾರೆ.

ಒಡಿಶಾದ ಝೂರ್ಸುಗುಡಾದಲ್ಲಿ ಶನಿವಾರ ಬಿಎಸ್‌ಎನ್‌ಎಲ್‌ನ ರಜತ ಮಹೋತ್ಸವದ ಅಂಗವಾಗಿ ಸ್ವದೇಶಿ 4-ಜಿ ತಂತ್ರಜ್ಞಾನ ಹಾಗು ದೇಶಾದ್ಯಂತ 97,500ಕ್ಕೂ ಹೆಚ್ಚು ಮೊಬೈಲ್ 4-ಜಿ ಟವರ್‌ಗಳನ್ನು ಕೂಡ ಅವರು ಲೋಕಾರ್ಪಣೆ ಮಾಡಿದರು. ಅದರಲ್ಲಿ 92,600 ತಾಣಗಳು ಸಂಪೂರ್ಣ 4ಜಿ ತಂತ್ರಜ್ಞಾನವನ್ನು ಆಧರಿಸಿವೆ.

ಸುಮಾರು 37,000 ಕೋಟಿ ರೂ. ವೆಚ್ಚದಲ್ಲಿ ಈ ಟವರ್‌ಗಳನ್ನು ಸ್ಥಾಪಿಸಲಾಗಿದ್ದು, ಅವು ಸಂಪೂರ್ಣವಾಗಿ ದೇಶೀಯ ತಂತ್ರಜ್ಞಾನ ಬಳಸಿ ನಿರ್ಮಿಸಲಾಗಿದೆ. ಭಾರತ ನಿರ್ಮಿತ ಈ ನೆಟ್ವರ್ಕ್ ಕ್ಲೌಡ್ ಆಧಾರಿತವಾಗಿದ್ದು, ಭವಿಷ್ಯದಲ್ಲಿ ಯಾವ ಅಡೆತಡೆಯಿಲ್ಲದೆ 5ಜಿಗೆ ಮೇಲ್ದರ್ಜೆ ಗೇರಿಸಬಹುದೆಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಡಿಜಿಟಲ್ ಇಂಡಿಯಾಗೆ ಬಲ

ಪ್ರಧಾನಿ ಮೋದಿ ಡಿಜಿಟಲ್ ಇಂಡಿಯಾ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ. ಅದು ಡಿಜಿಟಲ್ ಅಂತರವನ್ನು ಕಡಿಮೆ ಮಾಡಿ, ಗ್ರಾಮೀಣ ಸಮುದಾಯಗಳನ್ನು ಸಬಲೀಕರಣಗೊಳಿಸಲಿದೆ. ಈ ಯೋಜನೆಯ ಮೂಲಕ ದೇಶದ ಗಡಿ ಭಾಗಗಳು, ನಕ್ಸಲ್ ಪೀಡಿತ ಹಾಗು ಸಂಪರ್ಕವಿಲ್ಲದ 26,700ಕ್ಕೂ ಹೆಚ್ಚು ಗ್ರಾಮಗಳಿಗೆ ಇಂಟರ್‌ನೆಟ್ ಸಂಪರ್ಕವನ್ನು ಕಲ್ಪಿಸಲಾಗುತ್ತಿದೆ. ಅದರಲ್ಲಿ ಒಡಿಶಾದ 2,472 ಗ್ರಾಮಗಳೂ ಸೇರಿವೆ.

ಈ ಹೊಸ ಸಂಪರ್ಕ ಜಾಲದಿಂದ 20 ಲಕ್ಷಕ್ಕೂ ಹೆಚ್ಚು ಹೊಸ ಗ್ರಾಹಕರು ಬಿಎಸ್‌ಎನ್‌ಎಲ್‌ಗೆ ಸೇರ್ಪಡೆಯಾಗುವ ನಿರೀಕ್ಷೆ ಇದೆ. ವಿಶೇಷವಾಗಿ ಈ ಟವರ್‌ಗಳು ಸೌರಶಕ್ತಿಯಿಂದ ಕಾರ್ಯ ನಿರ್ವಹಿಸಲಿವೆ.

ಇದು ಭಾರತದ ಅತಿದೊಡ್ಡ ಹಸಿರು ದೂರಸಂಪರ್ಕ ಜಾಲವಾಗಿದ್ದು, ಸುಸ್ಥಿರ ಮೂಲಸೌಕರ್ಯ ನಿರ್ಮಾಣಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ.

## ಗಾಜಾ ಮೇಲಿನ ದಾಳಿ ಸಮರ್ಥಿಸಿದ ನೇತನ್ಯಾಹು

• ಪ್ರಜೋದಯ ವರದಿ

**ವಿಶ್ವಸಂಸ್ಥೆ:** ಗಾಜಾದ ಮೇಲೆ ಸಂಘರ್ಷ ಕೊನೆಗೊಳಿಸಲು ಹೆಚ್ಚುತ್ತಿರುವ ಒತ್ತಡ, ಯುದ್ಧ ಅಪರಾಧದ ಆರೋಪಗಳ ನಡುವೆಯೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕೆಲವು ದಿನಗಳಿಂದ ಆಸ್ಟ್ರೇಲಿಯಾ, ಕೆನಡಾ, ಫ್ರಾನ್ಸ್, ಬ್ರಿಟನ್ ಹಾಗು ಇತರೆ ದೇಶಗಳು ಪ್ಯಾಲೆಸ್ಟೀನ್‌ಗೆ ಸ್ವತಂತ್ರ ದೇಶದ ಮಾನ್ಯತೆ ನೀಡುವುದಾಗಿ ಘೋಷಿಸಿದ್ದವು. ಐರೋಪ್ಯ ಒಕ್ಕೂಟವು ಇಸ್ರೇಲ್ ಮೇಲೆ ಹೆಚ್ಚಿನ ಸುಂಕ ಹಾಗೂ ನಿರ್ಬಂಧ ವಿಧಿಸುವುದಾಗಿ ಪ್ರಕಟಿಸಿತ್ತು. ಅಂತರರಾಷ್ಟ್ರೀಯ ನ್ಯಾಯಾಲಯವು ಬಂಧನ ವಾರಂಟ್ ಹೊರಡಿಸಿತ್ತು. ಈ ಎಲ್ಲಾ ಬೆಳವಣಿಗೆಯ ಮಧ್ಯದಲ್ಲೇ ಉನ್ನತ ಅಧಿಕಾರಿಗಳ ಜೊತೆ ವಿಮಾನ ಏರಿದ್ದ ನೇತನ್ಯಾಹು ಅವರ ತಂಡವು ನ್ಯೂಯಾರ್ಕ್‌ಗೆ ಬಂದಿಳಿಯಿತು. ನಾನು ನಮ್ಮ ಸತ್ಯವನ್ನೇ ಹೇಳುತ್ತೇನೆಂದು ಮಾತು ಆರಂಭಿಸಿದ ನೇತನ್ಯಾಹು, ಕೊಲೆಗಾರರು, ಅತ್ಯಾಚಾರಿಗಳು, ಮಕ್ಕಳನ್ನು ಸುಡುವವರಿಗೆ ಇಸ್ರೇಲ್‌ನ ಹೃದಯ ಭಾಗದಲ್ಲಿ ದೇಶ ನೀಡಲು ಬಯಸುತ್ತಿರುವ ನಿರ್ಧಾರವನ್ನು ಖಂಡಿಸುತ್ತೇನೆಂದು ಹೇಳಿದರು.

### ಗಾಜಾ ಸಂಘರ್ಷ ಅಂತ್ಯಗೊಳಿಸುವ ಕಾಲ ಸನ್ನಿಹಿತ!

ಏತನ್ಮಧ್ಯೆ, ಯುದ್ಧವನ್ನು ಕೊನೆಗೊಳಿಸಲು ಇಸ್ರೇಲ್ ಮೇಲೆ ಅಂತರರಾಷ್ಟ್ರೀಯ ಒತ್ತಡ ಹೆಚ್ಚುತ್ತಿದೆ. ಪ್ರಪಂಚದಾದ್ಯಂತದ ಹಲವಾರು ದೇಶಗಳು ಇತ್ತೀಚೆಗೆ ಪ್ಯಾಲೆಸ್ತೀನ್ ಅನ್ನು ಸ್ವತಂತ್ರ ರಾಷ್ಟ್ರವೆಂದು ಗುರುತಿಸಿವೆ. ಆದರೆ ಇಸ್ರೇಲ್ ಅದನ್ನು ಸ್ವೀಕರಿಸಲು ನಿರಾಕರಿಸಿದೆ. ಹಲವಾರು ದೇಶಗಳು ಕದನ ವಿರಾಮಕ್ಕಾಗಿ ಇಸ್ರೇಲ್ ಮೇಲೆ ಒತ್ತಡ ಹೇರುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಒತ್ತಾಯಿಸಿವೆ.
ಶುಕ್ರವಾರ, ಟ್ರಂಪ್ ಶ್ವೇತಭವನದ ಹುಲ್ಲುಹಾಸಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಗಾಜಾದಲ್ಲಿನ ಸಂಘರ್ಷವನ್ನು ಕಡಿಮೆ ಮಾಡಲು ಮತ್ತು ಒತ್ತೆಯಾಳುಗಳನ್ನು ಮರಳಿ ಕರೆತರಲು ಅಮೆರಿಕ ಒಪ್ಪಂದಕ್ಕೆ ಹತ್ತಿರದಲ್ಲಿದೆ ಎಂದು ಆಶಿಸುವುದಾಗಿ ಅವರು ಹೇಳಿದರು.



**32 ಜನರ ಸಾವು:** ಯುದ್ಧ ನಿಲುಗಡೆ ಒತ್ತಡ ಹೆಚ್ಚುತ್ತಿರುವ ವೇಳೆಯಲ್ಲೇ ಇಸ್ರೇಲ್ ಗಾಜಾದಲ್ಲಿ ಬೃಹತ್ ವಾಯುದಾಳಿ ನಡೆಸಿದೆ. ಕಳೆದ ರಾತ್ರಿ ವಾಯು ದಾಳಿಯಲ್ಲಿ ಕನಿಷ್ಠ 32 ಜನರು ಸಾವನ್ನಪ್ಪಿದ್ದಾರೆಂದು ಗಾಜಾ ಆರೋಗ್ಯ ಅಧಿಕಾರಿಗಳು ವರದಿ ಮಾಡಿದ್ದಾರೆ.

ಕದನ ವಿರಾಮಕ್ಕಾಗಿ ಹೆಚ್ಚುತ್ತಿರುವ ಅಂತಾರಾಷ್ಟ್ರೀಯ ಒತ್ತಡದ ಮಧ್ಯೆ ಈ ದಾಳಿಗಳು ನಡೆದಿವೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಯುದ್ಧವನ್ನು ಮುಂದುವರೆಸುವ ಬಗ್ಗೆ ದೃಢವಾಗಿದ್ದಾರೆ.

ಶನಿವಾರ ಮುಂಜಾನೆ ಮಧ್ಯ ಮತ್ತು ಉತ್ತರ ಗಾಜಾದಲ್ಲಿ ನಡೆದ ವಾಯುದಾಳಿಗಳಲ್ಲಿ ಅವರ ಮನೆಗಳಲ್ಲಿ ಹಲವಾರು ಜನರು ಸಾವನ್ನಪ್ಪಿದರು. ನುಸೆರಾತ್ ನಿರಾಶ್ರಿತರ ಶಿಬಿರದಲ್ಲಿ ಒಂದೇ ಕುಟುಂಬದ ಒಂಬತ್ತು ಸದಸ್ಯರು ಸಾವನ್ನಪ್ಪಿದರು. ಶವಗಳನ್ನು ತಂದ ಅಲ್-ಅವ್ದಾ ಆಸ್ಪತ್ರೆಯ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ನೇತನ್ಯಾಹು, ತಮ್ಮ ದೇಶವು ಹಮಾಸ್ ವಿರುದ್ಧದ ಕೆಲಸವನ್ನು ಸಂಪೂರ್ಣವಾಗಿ ಮುಗಿಸಲು ಬಯಸುತ್ತದೆ ಎಂದು ಹೇಳಿದ ಕೆಲವೇ ಗಂಟೆಗಳ ನಂತರ ಈ ದಾಳಿಗಳು ಸಂಭವಿಸಿವೆ. ನೇತನ್ಯಾಹು ಅವರ ಹೇಳಿಕೆಯನ್ನು ದೇಶದ ಸಾರ್ವಜನಿಕರು ಮತ್ತು ಜಾಗತಿಕ ಸಮುದಾಯವನ್ನು ಉದ್ದೇಶಿಸಿ ಮಾತನಾಡಲಾಗಿತ್ತು. ಆದರೆ ಹಲವಾರು ದೇಶಗಳ ಪ್ರತಿನಿಧಿಗಳು ತಮ್ಮ ಭಾಷಣದ ಆರಂಭದಲ್ಲಿ ಸಭೆಯಿಂದ ಹೊರನಡೆದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK